# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಆಗಸ್ಟ್ 31, 2021

ಸಂಪುಟ : 48 ಸಂಚಿಕೆ : 109 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


# ಸೆ.2ರಂದು ಜಿಲ್ಲೆಗೆ ಅಮಿತ್ ಷಾ, ಸಿಎಂ

### ಗಾಂಧಿ ಭವನ, ಪೊಲೀಸ್ ವಸತಿ ಶಾಲೆ ಉದ್ಘಾಟನೆ



ದಾವಣಗೆರೆ, ಆ.30 - ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೆ.2 ರ ಗುರುವಾರದಂದು ಜಿಲ್ಲೆಗೆ ಆಗಮಿಸಲಿದ್ದು, ನಗರದಲ್ಲಿ ನಿರ್ಮಿಸ ಲಾಗಿರುವ ಗಾಂಧಿ ಭವನ ಹಾಗೂ ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ಪೊಲೀಸ್ ಪಬ್ಲಿಕ್ ಶಾಲೆಗಳನ್ನು ಉದ್ಘಾಟಿಸುವರು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೇಂದ್ರ ಗೃಹ ಸಚಿವರು ಹಾಗೂ ಮುಖ್ಯಮಂತ್ರಿಗಳ ಆಗಮನದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೇಂದ್ರ ಗೃಹ ಸಚಿವರು ಹಾಗೂ ಮುಖ್ಯಮಂತ್ರಿಗಳು ಅಂದು ಬೆಳಿಗ್ಗೆ ಗಾಂಧಿ ಭವನವನ್ನು ಉದ್ಘಾಟಿಸಿ, ಕೊಂಡಜ್ಜಿಯ ಕೊಂಡಜ್ಜಿ ಬಸಪ್ಪ ಸ್ಮಾರಕ ಮತ್ತು ಸಮಾಧಿಗೆ (2ನೇ ಪುಟಕ್ಕೆ)

# 6-8ನೇ ತರಗತಿ ಆರಂಭಕ್ಕೆ ಸಮ್ಮತಿ

## ಶೇ.2ಕ್ಕಿಂತ ಪಾಸಿಟಿವಿಟಿ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಸೆ.6ರಿಂದ ತರಗತಿ ಪ್ರಾರಂಭ

**ವಾರದಲ್ಲಿ 5 ದಿನ ತರಗತಿ, 50% ವಿದ್ಯಾರ್ಥಿಗಳಿಗೆ ಅವಕಾಶ**

**ಮದುವೆ ಸಮಾರಂಭ ನಿಯಮಾವಳಿಗಳಲ್ಲಿ ಸಡಿಲಿಕೆ**

**ಸಾರ್ವಜನಿಕವಾಗಿ ಗಣೇಶೋತ್ಸವ ಆಚರಣೆ ಸಂಬಂಧ ಸೆ.5 ರಂದು ನಡೆಯುವ ಸಭೆಯಲ್ಲಿ ತೀರ್ಮಾನ**

ಬೆಂಗಳೂರು, ಆ. 30- ಸೆಪ್ಟೆಂಬರ್ 6 ರಿಂದ ಕೋವಿಡ್-19 ಪಾಸಿಟಿವಿಟಿ ದರ ಶೇಕಡ 2ಕ್ಕಿಂತ ಕಡಿಮೆ ಇರುವ ತಾಲ್ಲೂಕುಗಳಲ್ಲಿ 6 ರಿಂದ 8ನೇ ತರಗತಿಗಳನ್ನು ಪ್ರಾರಂಭಿಸಲು ಸರ್ಕಾರ ಸಮ್ಮತಿಸಿದೆ.

ಮೈಸೂರು, ಹಾಸನ, ಚಿಕ್ಕಮಗಳೂರು, ಕೋಲಾರ, ಶಿವಮೊಗ್ಗದಲ್ಲಿ ಪಾಸಿಟಿವಿಟಿ ದರ 1.5ಕ್ಕಿಂತ ಕಡಿಮೆ ಇರುವುದರಿಂದ ಈ ಜಿಲ್ಲೆಗಳಲ್ಲಿ ವಿಧಿಸಿದ್ದ ವಾರಾಂತ್ಯದ ಕರ್ಫ್ಯೂ ಸಡಿಲಿಸಿದೆ.

ಕೊಡಗು ಹಾಗೂ ದಕ್ಷಿಣ ಕನ್ನಡದಲ್ಲಿ ಹಾಲಿ ಕಠಿಣ ನಿಯಮಾವಳಿ ಮುಂದುವರೆಸಲು ತೀರ್ಮಾನಿಸಿರುವ ಸರ್ಕಾರ, ಕೇರಳದಿಂದ ಬರುವವರಿಗೆ ಒಂದು ವಾರಗಳ ಕಾಲ ಕಡ್ಡಾಯ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲು ತೀರ್ಮಾನಿಸಿದೆ.

ಸಾರ್ವಜನಿಕವಾಗಿ ಗಣೇಶ ಉತ್ಸವ ಆಚರಣೆ ಸಂಬಂಧ ಸೆಪ್ಟೆಂಬರ್ 5 ರಂದು ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆಯುವ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುತ್ತದೆ.

ಗೃಹ ಕಚೇರಿ ಕೃಷ್ಣಾದಲ್ಲಿಂದು ಕೋವಿಡ್-19 ಸ್ಥಿತಿಗತಿ ಬಗ್ಗೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಯಿತು.

ಸಭೆ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್. ಅಶೋಕ್, ರಾಜ್ಯ, ರಾಷ್ಟ್ರದಲ್ಲಿ ಮೂರನೇ ಅಲೆ ಇಲ್ಲ. ಆದರೆ ತಜ್ಞರು ಎಚ್ಚರಿಕಾ ಕ್ರಮಗಳನ್ನು ಮುಂದುವರೆಸುವಂತೆ ಸೂಚಿಸಿದ್ದಾರೆ.

ತಜ್ಞರ ಸಲಹೆಯಂತೆ 6 ರಿಂದ 8ನೇ ತರಗತಿಗಳನ್ನು ವಾರದಲ್ಲಿ ಐದು ದಿನ ಮಾತ್ರ ಆರಂಭಿಸುತ್ತಿದ್ದೇವೆ. ಪ್ರತಿ ತರಗತಿಯಲ್ಲಿ ಶೇಕಡ 50ರಷ್ಟು ವಿದ್ಯಾರ್ಥಿಗಳು ಮಾತ್ರ ಇರುತ್ತಾರೆ, ಕೋವಿಡ್ ನಿಯಮಾವಳಿ (2ನೇ ಪುಟಕ್ಕೆ)

## ಶಾಲಾರಂಭದ ನಂತರ ಮಕ್ಕಳಲ್ಲಿ ಸೋಂಕು ಬಂದಿಲ್ಲ

ಬೆಂಗಳೂರು, ಆ. 30 - ಶಾಲೆಗಳು ಆರಂಭವಾದ ನಂತರ ಯಾವುದೇ ಮಕ್ಕಳಲ್ಲಿ ಸೋಂಕು ಪ್ರಕರಣ ಪತ್ತೆಯಾಗಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೇ. 70 ರಷ್ಟು ವಿದ್ಯಾರ್ಥಿಗಳು ತರಗತಿಗೆ ಭೌತಿಕವಾಗಿ ಹಾಜರಾಗಿ ಪಾಠ - ಪ್ರವಚನದಲ್ಲಿ ತೊಡಗಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಶೇ.99 ರವರೆಗೂ ಭೌತಿಕ ಹಾಜರಾತಿ ಕಂಡುಬಂದಿದೆ, ನಮ್ಮ ಶಾಲೆಗಳು ಪರಿಸರ ಸ್ನೇಹಿಯಿಂದ ಕೂಡಿವೆ ಮತ್ತು ಎಲ್ಲ ರೀತಿಯ ಮುಂಜಾಗ್ರತೆ ಕೈಗೊಂಡಿರುವುದರಿಂದ ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿ (2ನೇ ಪುಟಕ್ಕೆ)





ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಬುಧವಾರ ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಬಳಿ ಇರುವ ಶ್ರೀ ಕೃಷ್ಣನ ದೇವಸ್ಥಾನದಲ್ಲಿ ಶ್ರೀ ಕೃಷ್ಣನ ವಿಗ್ರಹವನ್ನು ಬೆಣ್ಣೆಯಿಂದ ಅಲಂಕರಿಸಲಾಗಿತ್ತು.
ಪಂಜಾಬ್‌ನ ಅಮೃತ್‌ಸರದಲ್ಲಿ ಶ್ರೀ ಕೃಷ್ಣನ ವೇಷ ತೊಟ್ಟ ಪುಟಾಣಿಗಳ ತಂಡ. (ಬಲಚಿತ್ರ)

# ಜಾವಲಿನ್: ಸುಮಿತ್ ದಾಖಲೆ

## ಮೊದಲ ಪ್ಯಾರಲಿಂಪಿಕ್‌ನಲ್ಲಿ ಬಂಗಾರದ ಪದಕ



ಟೋಕಿಯೋ, ಆ. 30 - ಜಪಾನ್‌ನಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಸುಮಿತ್ ಅಂತಿಲ್ ಅವರು ಜಾವಲಿತನ್ ಎಸೆತದಲ್ಲಿ ಹಲವು ಬಾರಿ ವಿಶ್ವ ದಾಖಲೆ ಬರೆದಿದ್ದು, ಎಫ್64 ವಿಭಾಗದಲ್ಲಿ ಬಂಗಾರದ ಪದಕ ಪಡೆದಿದ್ದಾರೆ. ಎಫ್46 ವಿಭಾಗದಲ್ಲಿ ಹಿರಿಯ ಆಟಗಾರ ದೇವೇಂದ್ರ ಝಾಝರಿಯ ಅವರು ಬೆಳ್ಳಿ ಪದಕ ಖಾತ್ರಿ ಮಾಡಿಕೊಂಡಿದ್ದಾರೆ.

ಇನ್ನೋರ್ವ ಜಾವಲಿನ್ ಪಟು ಸುಂದರ್ ಸಿಂಗ್ ಗುರ್ಜಾರ್ ಅವರು ಕಂಚಿನ ಪದಕ ಪಡೆದಿದ್ದಾರೆ. ಡಿಸ್ಕಸ್ ಎಸೆತದ ಎಫ್56 ವಿಭಾಗದಲ್ಲಿ ಯೋಗೇಶ್ ಕಥುನಿಯ ಅವರು ಬೆಳ್ಳಿ ಪಡೆದಿದ್ದಾರೆ.

23 ವರ್ಷದ ಅಂತಿಲ್ ಅವರು ತಮ್ಮ ಐದನೇ ಪ್ರಯತ್ನದಲ್ಲಿ 68.55 ಮೀಟರ್ ದೂರಕ್ಕೆ ಜಾವಲಿನ್ ಎಸೆಯುವ ಮೂಲಕ ಅಚ್ಚರಿಯ ಸಾಧನೆ ಮಾಡಿದರು. ಇದು ಹೊಸ ವಿಶ್ವ ದಾಖಲೆಯೂ ಆಗಿದೆ.

ನಂತರ ಮಾತನಾಡಿರುವ ಅಂತಿಲ್, ನಾನು ತರಬೇತಿ ಸಮಯದಲ್ಲಿ ಹಲವು ಬಾರಿ 71 ಮೀಟರ್ ಹಾಗೂ 72 ಮೀಟರ್ ದೂರಕ್ಕೆ ಜಾವಲಿನ್ ಎಸೆದಿದ್ದೇನೆ. ಸ್ಪರ್ಧೆಯಲ್ಲಿ ಏನಾಯಿತೋ ಗೊತ್ತಿಲ್ಲ. ಒಂದಂತೂ ನಿಜ, ನಾನು ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಸಾಧನೆ ಮಾಡುತ್ತೇನೆ ಎಂದಿದ್ದಾರೆ.

ಹರಿಯಾಣದ ಸೋನೆಪತ್ ನವರಾದ ಅಂತಿಲ್, 2015ರ ಮೋಟರ್‌ಬೈಕ್ ಅಪಘಾತದಲ್ಲಿ ಮೊಣಕಾಲ ಕೆಳಗಿನ (3ನೇ ಪುಟಕ್ಕೆ)

## ಆನೆಕೊಂಡದ ಕಾರಣಿಕ



ದಾವಣಗೆರೆ, ಆ. 30- ಇಲ್ಲಿನ ಐತಿಹಾಸಿಕ ಆನೆಕೊಂಡದ ಶ್ರೀ ಬಸವೇಶ್ವರ ಕಾರಣಿಕ ಮಹೋತ್ಸವ ಸೋಮವಾರ ನಡೆದಿದ್ದು, ಕಾರಣಿಕದ ನುಡಿ ಹೀಗಿದೆ.

'ರಾಮ ರಾಮ ಎಂದು ನುಡಿದಿತಲೇ
ಮುತ್ತೈದೆ ತಾಯಿ ಆನೆಗೆ
ಆರತಿ ಬೆಳಗ್ಯಾಳಲೇ
ನರಲೋಕದ ಜನ
ವಜ್ರದ ಕಿರೀಟ ಆನೆಗೆ ಹಾಕ್ಯಾರಲೆ,
ಮದ್ದು ಗುಂಡಿನ
ಹಾವಳಿ ಹೆಚ್ಚಾದಿತಾಲೇ ಎಚ್ಚರ ಎಚ್ಚರ'

# ಅಮೆರಿಕವನ್ನು ಕಂಗಾಲಾಗಿಸಿದ ಕೊರೊನಾ

ವಾಷಿಂಗ್ಟನ್, ಆ. 30 – ಅಮೆರಿಕದಲ್ಲಿ ಕೊರೊನಾ ಹರಡುವಿಕೆ ತೀವ್ರವಾಗಿ ಭುಗಿಲೆದ್ದಿದ್ದು, ಕಳೆದ ಚಳಿಗಾಲ ಹೊರತು ಪಡಿಸಿದರೆ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದೆ.

**ಐಸಿಯುಗಳು ತುಂಬುವ ಹಂತಕ್ಕೆ, ಸಾವುಗಳಲ್ಲಿ ತೀವ್ರ ಏರಿಕೆ**

ಆಸ್ಪತ್ರೆಗಳ ಮೇಲಿನ ಒತ್ತಡ ಅತಿ ಹೆಚ್ಚಾಗಿದ್ದು, ಪ್ರತಿನಿತ್ಯ ಸಾವನ್ನಪ್ಪುವವರ ಸಂಖ್ಯೆ ಮಾರ್ಚ್ ನಂತರದಲ್ಲಿ ಮತ್ತೆ ಸಾವಿರದ ಹಂತಕ್ಕೆ ಬಂದಿದೆ. ಜನವರಿ ನಂತರ ಪ್ರತಿದಿನ ಕಂಡು ಬರುವ ಕೊರೊನಾ ಸೋಂಕಿತರ ಸಂಖ್ಯೆ 1.40 ಲಕ್ಷದ ಹಂತಕ್ಕೆ ಬಂದಿದೆ.

ಕಳೆದ ಎರಡು ತಿಂಗಳಲ್ಲಿ ದೇಶಾದ್ಯಂತ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಐದು ಪಟ್ಟು ಹೆಚ್ಚಾಗಿದೆ. ವಿಶೇಷವಾಗಿ ದಕ್ಷಿಣದ ರಾಜ್ಯಗಳಲ್ಲಿ ಐ.ಸಿ.ಯು. ಬೆಡ್‌ಗಳು ಹೆಚ್ಚಾಗಿ ತುಂಬುತ್ತಿವೆ. ಲಸಿಕೆ ಪ್ರಮಾಣ ಕಡಿಮೆ ಇರುವ ಹಾಗೂ ಮಾಸ್ಕ್ ಧರಿಸುವುದಕ್ಕೆ ವಿರೋಧ ಹೆಚ್ಚಾಗಿರುವ ರಾಜ್ಯಗಳಲ್ಲಿ ಸಮಸ್ಯೆ ಹೆಚ್ಚಾಗಿದೆ. ಫ್ಲೋರಿಡಾದಲ್ಲಿ ಅತಿ ಹೆಚ್ಚಿನ 16,457 (3ನೇ ಪುಟಕ್ಕೆ)

# ಬೋನಿಗೆ ಬಿದ್ದ ಚಿರತೆ



ದಾವಣಗೆರೆ, ಆ.30- ಚನ್ನಗಿರಿ ತಾಲ್ಲೂಕಿನ ದಾಗಿನಕಟ್ಟೆ-ಯಲೋದಳ್ಳಿ ಗ್ರಾಮಸ್ಥರ ನಿದ್ದೆಗೆಡಿಸಿದ್ದ ಚಿರತೆ ಕೊನೆಗೂ ಅರಣ್ಯ ಇಲಾಖೆಯ ಯಶಸ್ವೀ ಕಾರ್ಯಾಚರಣೆಗೆ ಸೆರೆ ಸಿಕ್ಕಿದೆ.

ದಾಗಿನಕಟ್ಟೆ ಹಾಗೂ ಯಲೋದಹಳ್ಳಿ ಗ್ರಾಮಗಳ ಜನರ ನಿದ್ದೆಗೆಡಿಸಿದ್ದ ಚಿರತೆ ಕೊನೆಗೂ ಭಾನುವಾರ ರಾತ್ರಿ ಅರಣ್ಯ ಇಲಾಖೆ ಇಟ್ಟಿದ್ದ ಬೋನಿನಲ್ಲಿ ಸೆರೆಯಾಗಿದೆ.

ಇದೇ 24ರ ರಾತ್ರಿ ವೇಳೆ ಗ್ರಾಮದ ಬಳಿಯೇ ಇರುವ ಪಂಪ್ ಹೌಸ್ ಹತ್ತಿರ ಈ ಚಿರತೆ ಪ್ರತ್ಯಕ್ಷವಾಗಿತ್ತು. ಕಳೆದ ಒಂದು ವಾರದಿಂದ ಗ್ರಾಮದ ಸುತ್ತ ಮುತ್ತ ಓಡಾಡಿಕೊಂಡು ಜನರ ನಿದ್ದೆಗೆಡಿಸಿತ್ತು.

ಈ ಸಂಬಂಧ ಅರಣ್ಯ ಇಲಾಖೆ ಎರಡು ದಿನಗಳ ಹಿಂದೆ ಚಿರತೆ ಸೆರೆಗೆ ಬೋನ್ ಇಟ್ಟು ಕಾರ್ಯಾಚರಣೆ ಶುರು ಮಾಡಿತ್ತು. ಕೊನೆಗೂ ಚಿರತೆ ಬೋನಿಗೆ ಬಿದ್ದಿದೆ. ಅರಣ್ಯ ಇಲಾಖೆ ಚಿರತೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಕಳೆದ 4 ದಿನಗಳಿಂದ ಪ್ರತ್ಯಕ್ಷವಾಗುತ್ತಿದ್ದ ಚಿರತೆಯಿಂದ ಸ್ಥಳೀಯರಲ್ಲಿ ಆತಂಕ ಮನೆ ಮಾಡಿತ್ತು. ಚಿರತೆ ಕಾಣಿಸಿಕೊಂಡಿದ್ದರಿಂದ ಜಮೀನುಗಳಿಗೆ ತೆರಳಲು ರೈತರು ಭಯಭೀತರಾಗಿದ್ದರು. ಚಿರತೆ ಸಿಕ್ಕ ಮೇಲೆ ಗ್ರಾಮಸ್ಥರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

# ಜಿಲ್ಲೆಯಲ್ಲಿ 5 ಪಾಸಿಟಿವ್ 13 ಗುಣ

ದಾವಣಗೆರೆ, ಆ.30- ಜಿಲ್ಲೆಯಲ್ಲಿ ಸೋಮವಾರ 5 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 13 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕು 2, ಹರಿಹರ 1, ಜಗಳೂರು 1 ಹಾಗೂ ಹೊನ್ನಾಳಿ ತಾಲ್ಲೂಕಿನ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 242 ಸಕ್ರಿಯ ಪ್ರಕರಣಗಳಿವೆ.


## ಅಭಿನಂದನೆಗಳು






Master of Data Science

ಉನ್ನತ ವಿದ್ಯಾಭ್ಯಾಸಕ್ಕಾಗಿ ಲೀಡ್ಸ್ ಬೀಕೆಟ್ ಯುನಿವರ್ಸಿಟಿ - ಯುಕೆಗೆ ದಿನಾಂಕ 01-09-2021ರಂದು ಬೆಂಗಳೂರಿನ ಮೂಲಕ ತೆರಳುತ್ತಿರುವ

**ಚಂದನ್ ಬಿ.ಜೆ.**

ಅವರಿಗೆ ಹಾರ್ದಿಕ ಶುಭಾಶಯಗಳು.

- ಶ್ರೀಮತಿ ಮಂಜುಳ ಬಿ.ಎಸ್. ಮತ್ತು ಜಯಪ್ಪ ಜಿ. ಮಾಲೀಕರು, ರಾಜ ಗ್ಲಾಸ್ ಪ್ಲೈವುಡ್ಸ್ & ಹಾರ್ಡ್‌ವೇರ್ಸ್
- ಶ್ರೀಮತಿ ವಿಜಯ ಮತ್ತು ರಾಮಚಂದ್ರಪ್ಪ ಬಿ.ಜಿ. ಹಾಗೂ ಮಕ್ಕಳು
- ಶ್ರೀಮತಿ ಲೀಲಾ ಮತ್ತು ರಾಜಪ್ಪ ಜಿ. ಹಾಗೂ ಮಕ್ಕಳು
- ಶ್ರೀಮತಿ ಉಷಾ ಬಿ.ಎಸ್. ದಿ|| ರಂಗಪ್ಪ ಬಿ.ಜಿ. ಮತ್ತು ಮಕ್ಕಳು
- ಶ್ರೀಮತಿ ಗೀತಾ ಮತ್ತು ಶಿವಕುಮಾರ್ ಗೌಡ, ಸಮೃದ್ಧ್, ಶ್ರದ್ಧಾ
- ಶ್ರೀಮತಿ ಸಂಗೀತಾ ಮತ್ತು ಚಂದ್ರೇಗೌಡ, ಸ್ವರ
- ದಿ|| ಶ್ರೀಮತಿ ಸಾವಿತ್ರಮ್ಮ, ದಿ|| ಶರಣಪ್ಪನವರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಹುಚ್ಚವ್ವನಹಳ್ಳಿ
- **ಬಂಡೇಬೊಮ್ಮೇನಹಳ್ಳಿ ಸಿದ್ದರಾಮಜ್ಜರ ವಂಶಸ್ಥರು** ಮತ್ತು ಹಿತೈಷಿಗಳು ಹಾಗೂ ಸ್ನೇಹಿತರು

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

|| ಶ್ರೀ ರೇವಣಸಿದ್ದೇಶ್ವರ ಪ್ರಸನ್ನ || || ಶ್ರೀ ಚಿಂಚಿಲಿ ಮಾಯಮ್ಮದೇವಿ ಪ್ರಸನ್ನ ||



ದಾವಣಗೆರೆ, ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ದೂಡಾ ಕಚೇರಿ ಹಿಂಭಾಗ, 12 ನೇ ಕ್ರಾಸ್ ವಾಸಿ, **ಶ್ರೀ ಕೋಡಿ ಬಸಪ್ಪ,** ನಿವೃತ್ತ ಇಂಜಿನಿಯರ್ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 20.08.2021ನೇ ಶುಕ್ರವಾರ ರಾತ್ರಿ 1.05 ಕ್ಕೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ಬಸಮ್ಮನವರು**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 01.09.2019ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ **ದಾವಣಗೆರೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, 12ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಕೋಡಿ ವಂಶಸ್ಥರು, ಬನ್ನೇರ ವಂಶಸ್ಥರು ಹಾಗೂ ಬಂಧುಗಳು-ಮಿತ್ರರು. ಮೊ. : 9964062221, 9449433884

## ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ : 21-9-1961 ನಿಧನ : 31-8-2020

**ದಿ|| ಶ್ರೀ ವಿಜಯ್‌ಕುಮಾರ್ ಬೆಳಗಾವಿ**

ಎರೆದು ಅಜಸ್ರಧಾರೆಯ ಕರುಳತುಡಿತವನ್ನು, ಮರೆಯಾದಿರಿ ಮಧ್ಯಂತರದಲಿ
ನೀವಿರದ ಬಾಳಬಟ್ಟೆಯಲ್ಲಿ ನಿಮ್ಮ ನಗು ನಂದಾದೀಪವಾಗಿರಲಿ
ಬದುಕಿನ ದಾರಿ ಸವೆಸಲು ನಿಮ್ಮ ಹುಮ್ಮಸ್ಸೇ ಶಕ್ತಿಯಾಗಲಿ
ದುಃಖ ದುಮ್ಮಾನಗಳ ಈ ಬದುಕು ಅರಳಲಿ ಮನ್ವಂತರದಲಿ.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ನಿಮ್ಮ ಕುಟುಂಬದವರು, ಬೆಳಗಾವಿ ವಂಶಸ್ಥರು, ಬಂಧು-ಮಿತ್ರರು, ದಾವಣಗೆರೆ.

## ನಿವೃತ್ತ ಶಿಕ್ಷಕ ಮಹದೇವಪ್ಪ ಚನ್ನಬಸಪ್ಪ ಪಾಟೀಲ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ ನಿವೃತ್ತ ಶಿಕ್ಷಕರಾದ **ಮಹದೇವಪ್ಪ ಚನ್ನಬಸಪ್ಪ ಪಾಟೀಲ್ (ಎಂ.ಸಿ. ಪಾಟೀಲ್)** ಅವರು ದಿನಾಂಕ 30.08.2021ರ ಸೋಮವಾರ ಸಂಜೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.08.2021ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬೂದಾಳು ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ
- ಶ್ರೀಮತಿ ಮಂಜುಳಾ ಪಾಟೀಲ್, ದಾವಣಗೆರೆ
- ಶ್ರೀಮತಿ ಸೌಮ್ಯ, ಶ್ರೀ ಆನಂದ್ ಪಾಟೀಲ್, ದಾವಣಗೆರೆ
- ಶ್ರೀಮತಿ ರೇಖಾ, ಶ್ರೀ ರಾಜಶೇಖರ್
- ಶ್ರೀಮತಿ ಶೀಲಾ, ಡಾ. ತೇಜಸ್ವಿ
- ಶ್ರೀಮತಿ ರೂಪಾ ಶ್ರೀ ವಾಗೀಶ್

ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಹಾವೇರಿ ಜಿಲ್ಲಾ ಗುಡ್ಡದ ಮತ್ತಿಹಳ್ಳಿ ಗ್ರಾಮಸ್ಥರು ಮೊ. : 98452 50585



Sri Hoysala Vidya Samsthe (R.)

## Dr.B.R AMBEDKAR COLLEGE OF PHARMACY PCI - 4090

# 298/1, DCM Township, P.B. Road, Davangere - 577003. Karnataka.

## ADMISSIONS OPEN FOR 'D' PHARM

**MINIMUM QUALIFICATION FOR ADMISSION**

Candidates passed in 2nd PUC / Intermediate / 12th Standard or any other equivalent Examination with science subjects.

**Mobile : 9742947249, 9743823999**

Email: drbrambedkarcollegeofpharmacy@gmail.com

# ಐಟಿಐ ಪರೀಕ್ಷಾ ಕೇಂದ್ರಕ್ಕೆ ಒತ್ತಾಯಿಸಿ ಎಸ್‌ಎಫ್‌ಐ ಪ್ರತಿಭಟನೆ

ಜಗಳೂರು, ಆ.30- ತಾಲ್ಲೂಕಿನಲ್ಲಿ ಐಟಿಐ ಎಸ್‌ಸಿವಿಟಿ, ಎನ್‌ಸಿವಿಟಿ ಪರೀಕ್ಷಾ ಕೇಂದ್ರ ತೆರೆಯಲು ಒತ್ತಾಯಿಸಿ, ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ಇಂದು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.




ಪಟ್ಟಣದ ಐಟಿಐ ಕಾಲೇಜಿನಿಂದ ಆಗಮಿಸಿ, ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿ, ನಂತರ ತಹಶೀಲ್ದಾರ್‌ಗೆ ಲಿಖಿತ ಮನವಿ ಸಲ್ಲಿಸಿದರು.

ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಮಹಾಲಿಂಗಪ್ಪ ಮಾತನಾಡಿ, ಜಗಳೂರು ಅತ್ಯಂತ ಹಿಂದುಳಿದ ಬರಪೀಡಿತ ತಾಲ್ಲೂಕು ಆಗಿದ್ದು ವಿದ್ಯಾರ್ಥಿಗಳು ಪರೀಕ್ಷಾ ವೇಳೆ ದಾವಣಗೆರೆಗೆ ತೆರಳಿ ಪರೀಕ್ಷೆ ಬರೆಯಲು ಸಾವಿರಾರು ರೂಪಾಯಿ ವೆಚ್ಚವಾಗಲಿದೆ. ಸೂಕ್ತ ಸಾರಿಗೆ ವ್ಯವಸ್ಥೆಯಿಲ್ಲದೆ ಹರಸಾಹಸ ಪಡಬೇಕಾದ ಅನಿವಾರ್ಯತೆ ಎದುರಾಗುವುದಲ್ಲದೆ, ಒತ್ತಡದಿಂದ ಫಲಿತಾಂಶಕ್ಕೆ ಹಿನ್ನಡೆಯಾಗಿ ಭವಿಷ್ಯಕ್ಕೆ ಕೊಡಲಿ ಪೆಟ್ಟು ಬಿದ್ದಿದೆ ಎಂದರು.

ಇಲ್ಲಿನ ಕಾಲೇಜಿನಲ್ಲಿ ಸಕಲ ಮೂಲ ಸೌಕರ್ಯಗಳಿದ್ದರೂ ಪರೀಕ್ಷಾ ಕೇಂದ್ರ ಇಲ್ಲದಿರುವುದು ದುರಂತವೇ ಸರಿ. ಕೂಡಲೇ ಕೈಗಾರಿಕಾ ತರಬೇತಿ ಸಂಸ್ಥೆಯ ಉನ್ನತ ಮಟ್ಟದ ಅಧಿಕಾರಿಗಳು ಪರೀಕ್ಷಾ ಕೇಂದ್ರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ಅನಂತರಾಜ್ ಮಾತನಾಡಿ, ನಿರಂತರ ವಿದ್ಯಾರ್ಥಿ ಸಂಘಟನೆಗಳ ಹೋರಾಟದ ಫಲವಾಗಿ ಸುಸಜ್ಜಿತ ಸ್ವಂತ ಕಟ್ಟಡ ನಿರ್ಮಾಣವಾಗಿದೆ. ಗ್ರಾಮೀಣ ಭಾಗದ ಸಾವಿರಾರು ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ ತರಬೇತಿ ವರದಾನವಾಗಿದೆ. ಕೋವಿಡ್ ಪರಿಣಾಮ ಸತತ ಎರಡು ವರ್ಷಗಳಿಂದ ಭೌತಿಕ ತರಗತಿಗಳಿಲ್ಲದೆ ಒಂದೆಡೆ ವಿದ್ಯಾರ್ಥಿಗಳ ಗುಣಾತ್ಮಕ ತರಬೇತಿ ಶಿಕ್ಷಣ ಕುಂಠಿತವಾಗಿದ್ದರೆ, ಮತ್ತೊಂದೆಡೆ ಸ್ಥಳೀಯವಾಗಿ ಪರೀಕ್ಷಾ ಕೇಂದ್ರವಿಲ್ಲದಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದ್ದು, ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಶೈಕ್ಷಣಿಕ ನೀತಿಗಳನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂದರ್ಭದಲ್ಲಿ ಎಸ್‌ಎಫ್‌ಐ ತಾಲ್ಲೂಕು ಅಧ್ಯಕ್ಷ ತಮಲೇಹಳ್ಳಿ ಅಂಜಿನಪ್ಪ, ತಿಪ್ಪೇಸ್ವಾಮಿ, ರಂಗನಾಥ, ಓಬಳೇಶ್, ಹನುಮಂತಪ್ಪ, ಮಹೇಶ್, ರಾಜು ಸೇರಿದಂತೆ ಅನೇಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ರುದ್ರಾಭಿಷೇಕ




ಹರಿಹರ, ಆ.30- ನಗರದ ಬೈಪಾಸ್ ಬಳಿ ಇರುವ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸ್ವಾಮಿಗೆ ಶ್ರಾವಣ ಮಾಸದ ಕೊನೆಯ ಸೋಮವಾರದ ನಿಮಿತ್ಯ ಇಂದು ವಿಶೇಷ ಪೂಜೆ ಸಲ್ಲಿಸಲಾಯಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಬಿ. ಮಂಜುನಾಥ್ ಮಾತನಾಡಿ, ದೇವಸ್ಥಾನವು ಬಹಳ ಪುರಾತನ ಕಾಲದಿಂದಲೂ ಇದ್ದು, ದೇವಸ್ಥಾನ ಬಹಳ ಚಿಕ್ಕದಾಗಿದ್ದರಿಂದ ಮೊದಲಿನಿಂದಲೂ ನಾಗಪ್ಪ ಸ್ವಾಮಿಗೆ ಪೂಜೆಯನ್ನು ಸಲ್ಲಿಸುತ್ತಾ ಬಂದಿದ್ದು, ಇದನ್ನು ದೊಡ್ಡ ಪ್ರಮಾಣದಲ್ಲಿ ಕಟ್ಟುವುದಕ್ಕೆ ಸಮಿತಿಯ ವತಿಯಿಂದ ಎರಡೂವರೆ ಗುಂಟೆ ಸ್ಥಳವನ್ನು ಖರೀದಿಸಿ ದೇವಸ್ಥಾನ ನಿರ್ಮಾಣಕ್ಕಾಗಿ ವ್ಯವಸ್ಥೆ ಮಾಡುತ್ತಿದ್ದ ಸಮಯದಲ್ಲಿ ಪುರಾತನ ಲಿಪಿಯಲ್ಲಿ ಬರೆದಿರುವ ಕಲ್ಲು ಸಿಕ್ಕಿದೆ.

ಅದರಲ್ಲಿ ಮಹಾಲಿಂಗೇಶ್ವರ ದೇವಸ್ಥಾನ ಎಂದು ನಮೂದಾಗಿದೆ. ಇನ್ನು ಮುಂದೆ ಈ ಸ್ಥಳದಲ್ಲಿ ಮಹಾಲಿಂಗೇಶ್ವರ ಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಹನಗವಾಡಿ ಗ್ರಾಮಸ್ಥರು ಒಮ್ಮತದ ತೀರ್ಮಾನ ಮಾಡಿದ್ದು, ದೇವಸ್ಥಾನ ನಿರ್ಮಾಣಕ್ಕೆ ಗುದ್ದಲಿ ಪೂಜೆ ಮಾಡಲಾಯಿತು ಎಂದು ಹೇಳಿದರು. ಅನ್ನ ಸಂತರ್ಪಣೆ ಕಾರ್ಯಕ್ಕೆ ಸಮಾಜ ಸೇವಕ ಎನ್.ಹೆಚ್. ಶ್ರೀನಿವಾಸ್ ನಂದಿಗಾವಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ದೇವೇಂದ್ರಪ್ಪ, ಕಾರ್ಯದರ್ಶಿ ಎಸ್.ಕರಿಬಸಪ್ಪ, ಖಜಾಂಚಿ ಶಿವಕುಮಾರ್ ಸ್ವಾಮಿ, ವಿಜಯಕುಮಾರ್ ಹುಲ್ಲುಮನಿ, ಎಸ್.ಎಸ್. ಸಿದ್ದಪ್ಪ, ರುದ್ರಮುನಿ, ಬಿ.ಯು. ನರೇಂದ್ರ, ಎಸ್.ಎಂ. ಮಂಜಪ್ಪ, ಎಸ್.ಎಂ. ರೇವಣಸಿದ್ದಪ್ಪ, ಸಿ.ಎನ್. ಮಂಜು, ಎಸ್.ಜೆ. ಗುರುಶಾಂತಪ್ಪ, ಶಿವಪ್ಪ, ಶಿವಕುಮಾರ್ ಇನ್ನಿತರರಿದ್ದರು.

## ಸೆ.2ರಂದು ಜಿಲ್ಲೆಗೆ ಅಮಿತ್ ಷಾ, ಸಿಎಂ

(1ನೇ ಪುಟದಿಂದ) ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸುವರು. ನಂತರ ಪೊಲೀಸ್ ಪಬ್ಲಿಕ್ ಶಾಲೆ ಹಾಗೂ ನಾಮಫಲಕ ಉದ್ಘಾಟನೆ ಮತ್ತು ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗಿಯಾಗುವರು ಎಂದು ತಿಳಿಸಿದರು.

ಈ ಕಾರ್ಯಕ್ರಮಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮತ್ತು ಇನ್ನೂ ಕೆಲ ಸಚಿವರು ಭಾಗಿಯಾಗುವ ನಿರೀಕ್ಷೆ ಇದೆ ಎಂದವರು ಹೇಳಿದ್ದಾರೆ.

ಗಾಂಧಿ ಭವನ ಉದ್ಘಾಟನೆ ನೆರವೇರಿಸಿ ಅಲ್ಲಿಂದ ಶಾಮನೂರು, ಡಿಸಿ ಸರ್ಕಲ್, ಸಂಗೊಳ್ಳಿ ರಾಯಣ್ಣ ಸರ್ಕಲ್ ಮೂಲಕ ಕೊಂಡಜ್ಜಿಗೆ ಹೋಗುವ ಕಾರಣ, ಸೆ.1 ರ ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸ್ಥಳ ಪರಿಶೀಲನೆ ಮಾಡಲಿದ್ದು ಆಯಾ ರಸ್ತೆಗಳಲ್ಲಿ ಹಮ್ಮಿಕೊಂಡಿರುವ ಅನೇಕ ಕಾಮಗಾರಿಗಳನ್ನು ಆದಷ್ಟು ಬೇಗ ಪೂರೈಸಿ ರಸ್ತೆಯನ್ನು ತೆರವುಗೊಳಿಸಿ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಪಾಲಿಕೆ ಆಯುಕ್ತರು, ಸ್ಮಾರ್ಟ್‌ಸಿಟಿ, ದೂಡಾ ಪ್ರಾಧಿಕಾರ ಹಾಗೂಪಿಡಬ್ಲ್ಯೂಡಿಅಧಿಕಾರಿಗಳಿಗೆಸೂಚನೆನೀಡಿದರು.

ಕೊಂಡಜ್ಜಿಯಲ್ಲಿ ಸ್ಮಾರಕ ಹಾಗೂ ಸಮಾಧಿಯ ಸುತ್ತಮುತ್ತ ಸ್ವಚ್ಛತೆ ಜೊತೆ ಹೂವಿನ ಅಲಂಕಾರ ಮಾಡಿಸಬೇಕು. ಪುಷ್ಪ ನಮನ ವೇಳೆ ಹೆಚ್ಚಿನ ಜನ ಸೇರದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಎಸ್.ಪಿ ಸಿ.ಬಿ.ರಿಷ್ಯಂತ್ ಮಾತನಾಡಿ, ನಗರದ ಸ್ವಚ್ಛತೆ ಕಡೆ ಹೆಚ್ಚು ಕಾಳಜಿ ವಹಿಸಿ, ರಸ್ತೆಯಲ್ಲಿ ಕಸವಿಲ್ಲದಂತೆ ನೋಡಿಕೊಳ್ಳಬೇಕು. ಕೊಂಡಜ್ಜಿ ರಸ್ತೆ ಬದಿ ಇರುವ ಗಿಡ ಗಂಟಿಗಳನ್ನು ತೆಗೆದು ವಾಹನ ಓಡಾಟಕ್ಕೆ ಯಾವುದೇ ಸಮಸ್ಯೆಯಾಗದಂತೆ ಕೆಲಸ ನಿರ್ವಹಿಸುವ ಜವಾಬ್ದಾರಿಯನ್ನು ಮಹಾನಗರ ಪಾಲಿಕೆ ಹಾಗೂ ಪಿಡಬ್ಲ್ಯೂಡಿ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಜೀವ್ ಎಂ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### 15 ಕೋಟಿ ರೂ.ಗಳ ಪೊಲೀಸ್ ವಸತಿ ಶಾಲೆ

**ಕೊಂಡಜ್ಜಿಯಲ್ಲಿ 6 ರಿಂದ ಹತ್ತನೇ ತರಗತಿಯವರೆಗಿನ ಪೊಲೀಸ್ ಪಬ್ಲಿಕ್ ಶಾಲೆಯನ್ನು 15 ಕೋಟಿ ರೂ.ಗಳ ಅನುದಾನ ದಲ್ಲಿ ನಿರ್ಮಿಸಲಾಗಿದೆ. ಇದರಲ್ಲಿ 200 ಬಾಲಕರು ಹಾಗೂ 100 ಬಾಲಕಿಯರ ಅಧ್ಯಯನಕ್ಕೆ ವಸತಿಯುತ ವ್ಯವಸ್ಥೆ ಇದೆ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ. 10 ಎಕರೆ ಜಾಗದಲ್ಲಿ ವಸತಿ ನಿಲಯ ಹಾಗೂ ಆಡಳಿತ ಬ್ಲಾಕ್ ನಿರ್ಮಿಸಲಾಗಿದೆ. ಶೀಘ್ರದಲ್ಲೇ ಶಿಕ್ಷಕರು ಹಾಗೂ ಸಿಬ್ಬಂದಿ ನೇಮಕಾತಿಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ. ಬೆಂಗಳೂರು ಹಾಗೂ ಮೈಸೂರಿನಲ್ಲಿರುವ ಪೊಲೀಸ್ ಶಾಲೆಯಂತೆ ಈ ಶಾಲೆ ನಿರ್ಮಾಣವಾಗಿದೆ. ಈ ಶಾಲೆಯಲ್ಲಿ ಪೊಲೀಸರ ಮಕ್ಕಳಿಗೆ ಮೊದಲ ಆದ್ಯತೆ ಇರಲಿದೆ. ಇತರರಿಗೂ ನಿಯಮಗಳ ಅನುಸಾರ ಪ್ರವೇಶ ಕಲ್ಪಿಸಲಾಗುವುದು ಎಂದು ರಿಷ್ಯಂತ್ ಹೇಳಿದ್ದಾರೆ.**

### 3 ಕೋಟಿ ರೂ. ಗಾಂಧಿ ಭವನ

ವಾರ್ತಾ ಮತ್ತು ಪ್ರಚಾರ ಇಲಾಖೆಯ 3 ಕೋಟಿ ರೂ. ಅನುದಾನದಲ್ಲಿ ನಗರದಲ್ಲಿ ಒಂದು ಎಕರೆ ಪ್ರದೇಶದಲ್ಲಿ ಗಾಂಧಿ ಭವನ ನಿರ್ಮಾಣವಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ. ಭವನದಲ್ಲಿ ಗಾಂಧೀಜಿ ಅವರ ಪ್ರತಿಮೆಗಳು, ಪಾದಯಾತ್ರೆ ಬಿಂಬಿಸುವ ಶಿಲ್ಪಗಳು, ಉದ್ಯಾನವನ, ಗ್ರಂಥಾಲಯ, 120 ಜನರ ಸಾಮರ್ಥ್ಯದ ಹಾಲ್ ಸೇರಿದಂತೆ ಹಲವು ಸೌಲಭ್ಯಗಳಿವೆ ಎಂದವರು ಹೇಳಿದ್ದಾರೆ.

## ರಾಣೇಬೆನ್ನೂರ್ ಕಾ ರಾಜಾ ಗಣೇಶ : ಈ ವರ್ಷವೂ ಒಂದೇ ದಿನ

ರಾಣೇಬೆನ್ನೂರು, ಆ.30- ಕಳೆದ 12 ವರ್ಷಗಳಿಂದ ವಿವಿಧ ರೀತಿಯಲ್ಲಿ ಆಚರಿಸಿ, ನಗರದ ಹಾಗೂ ಸುತ್ತಲಿನ ತಾಲ್ಲೂಕುಗಳ ಜನಾಕರ್ಷಣೆಯಾಗಿದ್ದ ವಂದೇ ಮಾತರಂ ಸೇವಾ ಸಂಘದ ರಾಣೇಬೆನ್ನೂರ್ ಕಾ ರಾಜಾ ಗಣೇಶೋತ್ಸವವನ್ನು ಪ್ರತಿಷ್ಠಾಪನೆ ಮಾಡಿ, ಒಂದೇ ದಿನದಲ್ಲಿ ವಿಸರ್ಜಿಸಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಪ್ರಕಾಶ್ ಬುರಡಿಕಟ್ಟಿ ತಿಳಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 10 ರಂದು ಬೆಳಿಗ್ಗೆ 5 ಗಂಟೆಗೆ ಗಣೇಶನನ್ನು ಪ್ರತಿಷ್ಠಾಪಿಸಿ, ಅಂದೇ ಸಂಜೆ ವಿಸರ್ಜಿಸಲಾಗುವುದು. ವಿಸರ್ಜನಾ ಕಾರ್ಯಕ್ರಮದಲ್ಲಿ ಸಂಸ್ಥೆಯ ಸದಸ್ಯರು ಮಾತ್ರ ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ಲಯನ್ಸ್‌ನಲ್ಲಿ ಲಸಿಕೆ

ದಾವಣಗೆರೆ, ಆ.30- ಲಯನ್ಸ್ ಕ್ಲಬ್ ದಾವಣಗೆರೆ ಹಾಗೂ ದೊಡ್ಡಪೇಟೆಯ ನಗರ ಆರೋಗ್ಯ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ದೇವರಾಜ ಅರಸು ಬಡಾವಣೆಯಲ್ಲಿ ಇರುವ ಲಯನ್ಸ್ ಕ್ಲಬ್‌ನಲ್ಲಿ ಬರುವ ಸೆ.1 ರಂದು ಬೆಳಿಗ್ಗೆ 10 ಗಂಟೆಯಿಂದ ಸಾರ್ವಜನಿಕರಿಗೆ ಮೊದಲ ಹಾಗೂ ಎರಡನೇ ಡೋಸ್‌ನ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ ಲಸಿಕಾ ಅಭಿಯಾನ ನಡೆಯಲಿದೆ ಎಂದು ಅಧ್ಯಕ್ಷ ಎಸ್.ಓಂಕಾರಪ್ಪ ತಿಳಿಸಿದ್ದಾರೆ.

## ತರಗತಿ ಆರಂಭಕ್ಕೆ ಸಮ್ಮತಿ

(1ನೇ ಪುಟದಿಂದ)
ಪಾಲನೆಯೊಂದಿಗೆ ಶಾಲೆಗಳು ಪ್ರಾರಂಭವಾಗಲಿವೆ. ಶನಿವಾರ ಮತ್ತು ಭಾನು ವಾರ ಶಾಲೆಗಳ ಶುಚಿತ್ವಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದರು.

ಇನ್ನು ಮುಂದೆ ಮದುವೆ ಸಮಾರಂಭಗಳಿಗೆ ನಿಯಮಾವಳಿಗಳಲ್ಲಿ ಸಡಿಲಿಕೆ ಮಾಡಿದ್ದು, ಕಲ್ಯಾಣ ಮಂಟಪಗಳ ಸಾಮರ್ಥ್ಯದ ಶೇಕಡ 50 ರಷ್ಟು ಮಾತ್ರ ಸೇರಬಹುದಾಗಿದೆ, ಆದರೆ, ಈ ಮಿತಿ 400 ಜನರಿಗೆ ಮೀರಬಾರದು ಎಂದು ಸ್ಪಷ್ಟಪಡಿಸಿದರು.

ಗಣೇಶ ಉತ್ಸವದ ಸಾರ್ವಜನಿಕ ಆಚರಣೆ ಸಂಬಂಧ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು, ಜಿಲ್ಲಾಡಳಿತದಿಂದ ವರದಿ ತರಿಸಿಕೊಂಡು ಸೆಪ್ಟೆಂಬರ್ 5 ರ ಸಭೆಯಲ್ಲಿ ಉತ್ಸವ ಆಚರಣೆಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ರಾಜ್ಯಾದ್ಯಂತ 200 ಕೇಂದ್ರಗಳಲ್ಲಿ ಮಾತ್ರ ದೊಡ್ಡ ಪ್ರಮಾಣದಲ್ಲಿ ಗಣೇಶ ಉತ್ಸವ ನಡೆಯುತ್ತದೆ, ಉಳಿದಂತೆ ಸಣ್ಣ ಪ್ರಮಾಣದಲ್ಲಿ ನಡೆಯುತ್ತವೆ, ಈ ಎಲ್ಲದರ ಬಗ್ಗೆ ವರದಿ ತರಿಸಿಕೊಂಡು ಅಂದು ತೀರ್ಮಾನ ಕೈಗೊಳ್ಳಲಾಗುವುದು. ಉತ್ಸವಕ್ಕೆ ನಮ್ಮ ವಿರೋಧ ಇಲ್ಲ, ಆದರೆ ಕೋವಿಡ್ ಸೋಂಕು ನಮ್ಮಿಂದ ದೂರ ಹೋಗಿಲ್ಲ, ಇದನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕವಾಗಿ ಉತ್ಸವ ಆಚರಣೆಗೆ ಸಂಬಂಧಿಸಿದಂತೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಲಿದೆ ಎಂದರು. ರಾಜ್ಯದ 2,912 ಪಂಚಾಯತ್ ವ್ಯಾಪ್ತಿಯಲ್ಲಿ ಪಾಸಿಟಿವಿಟಿ ದರ ಶೂನ್ಯವಿದೆ, ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ.ಆದರೆ ನೆರೆಯ ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಪಾಸಿಟಿವಿಟಿ ದರ ಶೇಕಡ 19 ರಷ್ಟಿದೆ. ರಾಜ್ಯದ ಜನರ ಆರೋಗ್ಯ ದೃಷ್ಟಿಯಿಂದ ನಾವು ಕೋವಿಡ್-19 ಕಠಿಣ ನಿಯಮಾವಳಿಗಳನ್ನು ಮುಂದುವರೆಸಿಕೊಂಡು ಕೆಲವು ತೀರ್ಮಾನಗಳನ್ನು ಕೈಗೊಳ್ಳುತ್ತೇವೆ, ಜೊತೆಗೆ ಲಸಿಕೆ ನೀಡಿಕೆ ಪ್ರಮಾಣ ಹೆಚ್ಚುಗೊಳಿಸಲು ಸಭೆ ನಿರ್ಧರಿಸಿದೆ ಎಂದರು.

### ಸೋಂಕು ಬಂದಿಲ್ಲ

(1ನೇ ಪುಟದಿಂದ) ಗೊಂದಲವಿಲ್ಲ ಎಂದವರು ಹೇಳಿದರು.

ನಗರ ಪ್ರದೇಶಗಳಲ್ಲಿ ಇನ್ನೂ ಕೆಲವು ಶಾಲೆಗಳು ಆನ್‌ಲೈನ್ ಮೂಲಕವೇ ಪಾಠ ನಡೆಸುತ್ತಿವೆ, ಎಲ್ಲ ಮಕ್ಕಳಿಗೂ ಹಾಜರಾತಿ ನೀಡಲಾಗುವುದು.

ಒಂದರಿಂದ 8 ನೇ ತರಗತಿವರೆಗೆ ಆರಂಭಿಸುವಂತೆ ನಮ್ಮ ಮೇಲೆ ಭಾರೀ ಒತ್ತಡ ಇದೆ, ಶಾಲೆ ಆರಂಭಕ್ಕೆ ನಾವೂ ಸಿದ್ಧರಿದ್ದೇವೆ. ಆದರೆ, ಈ ವಿಷಯದಲ್ಲಿ ತಜ್ಞರ ಅಭಿಪ್ರಾಯವೇ ಅಂತಿಮವಾಗಿರುತ್ತದೆ ಎಂದರು.

## ರಂಗ ಶಿಕ್ಷಣ ಡಿಪ್ಲೋಮಾಗೆ ಅರ್ಜಿ

ಸಾಣೇಹಳ್ಳಿ, ಆ.30- ಸ್ಥಳೀಯ ಶಿವಕುಮಾರ ರಂಗ ಪ್ರಯೋಗ ಶಾಲೆಯ ತರಬೇತಿಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ನಾಳೆ ದಿನಾಂಕ 31 ಕೊನೆಯ ದಿನವಾಗಿರುತ್ತದೆ.

ಆಸಕ್ತರು ಶ್ರೀ ಶಿವಕುಮಾರ ರಂಗ ಪ್ರಯೋಗ ಶಾಲೆ ಸಾಣೇಹಳ್ಳಿ - 577515, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇಲ್ಲಿ ಅರ್ಜಿಗಳನ್ನು ಪಡೆದುಕೊಳ್ಳಬಹುದು. ಅಥವಾ ರಂಗಶಾಲೆಯ ವೆಬ್‌ಸೈಟ್ www.theatreschoolsanehalli.org ನಲ್ಲಿ ಪ್ರವೇಶ ಅರ್ಜಿಯನ್ನು ಡೌನ್‌ಲೋಡ್ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು ಪೋಸ್ಟ್ ಮೂಲಕ ತಲುಪಿಸಬಹುದು. ವಿವರಕ್ಕೆ ಮೊಬೈಲ್ : 9108091845, 9448398144 ನ್ನು ಸಂಪರ್ಕಿಸಲು ರಂಗ ಪ್ರಯೋಗ ಶಾಲೆಯ ಪ್ರಾಂಶುಪಾಲ ಆರ್. ಜಗದೀಶ್ ತಿಳಿಸಿದ್ದಾರೆ.

**ಸೈಟ್/ಮನೆ ಮಾರಾಟಕ್ಕೆ**
30x40 ಮನೆ, ಸಿದ್ದವೀರಪ್ಪ ಸೈಟ್ ಕಾರ್ನರ್ 40x50 ಬಾಪೂಜಿ ಸ್ಕೂಲ್ ಹಿಂಭಾಗ, 30x40 ಉತ್ತರ ನಿಜಲಿಂಗಪ್ಪ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315 -63409

**ಮನೆ ಪಾಠಕ್ಕೆ ಟೀಚರ್ ಬೇಕಾಗಿದ್ದಾರೆ**
8ನೇ ತರಗತಿ CBSE ವಿದ್ಯಾರ್ಥಿಗೆ ಮನೆ ಪಾಠಕ್ಕೆ English ಮಾತಾಡಲು ಮತ್ತು English Grammer ಬಲ್ಲ ಟೀಚರ್ ಬೇಕಾಗಿದ್ದಾರೆ.
ನಿಂಚನ ಸ್ಕೂಲ್ ಎದುರು, ನಿಟುವಳ್ಳಿ
ಮೊ. : 98444 81661

**ಜಮೀನು ಖರೀದಿಗೆ ಬೇಕು (JVಗೆ)**
ಸೈಟ್ ಮಾಡುವಂತಹ ಜಮೀನು Joint Ventureಗೆ ಬೇಕಾಗಿದೆ. 10ರಿಂದ 70 ಎಕರೆವರೆಗೆ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315 -63409

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 1ನೇ ಹಂತ ಹರಿಹರದಿಂದ ದಾವಣಗೆರೆ ಕಡೆಗೆ 50x80 ದಕ್ಷಿಣ, 50x80 ಉತ್ತರ ಡಬಲ್ ರೋಡ್‌ಗೆ, 50x150 ಪಶ್ಚಿಮ, ದಕ್ಷಿಣ ಕಾರ್ನರ್ (ಡಬಲ್ ರೋಡ್‌ಗೆ), 50x80 ಪಶ್ಚಿಮ ರಿಂಗ್ ರೋಡ್ ಸರ್ಕಲ್, 40x60 ಪೂರ್ವ, ಪಶ್ಚಿಮ 40x60, 30x50 ಉತ್ತರ, 50x40 ಉತ್ತರ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ರಾತ್ರಿ ಪಾಳೆಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
63641 33480
80502 19547

**ಬೇಕಾಗಿದ್ದಾರೆ**
ಕಂಪ್ಯೂಟರ್ ಬರುವ ರಿಸೆಪ್ಷನಿಸ್ಟ್, ಸ್ಟಾಫ್ ನರ್ಸ್, ವಾರ್ಡ್ ಬಾಯ್ ಆಸ್ಪತ್ರೆಗೆ ಬೇಕಾಗಿದ್ದಾರೆ.
82965 21827

**WANTED**
Part Time English Lecturer
St Paul's P.U. College
P.j. Extension, Davanagere
08192 232332
94493 70425
85480 00749

**ಬೇಕಾಗಿದ್ದಾರೆ**
ಪಾರ್ಟ್ ಟೈಮ್ / ಫುಲ್ ಟೈಮ್
ಸೂಪರ್ ಮಾರ್ಟ್‌ನ ಒಳಗಡೆ ಚಟುವಟಿಕೆಯಿಂದ ಕೆಲಸ ಮಾಡಲು ಅನುಭವವಿರುವ ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ಸಂಬಳ : Rs 6000/- ದಿಂದ 8,000/-
Call : 87478 97209

**WANTED FEMALE**
Data Entry 1, Office Work 1 Computer faculty 2. 6000 + Salary, Incentive (1 Year Computer Course)
95910 78215

**ಕೆಲಸ ಖಾಲಿ ಇದೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಕಂಪ್ಯೂಟರ್ ಬಿಲ್ಲಿಂಗ್ ಹಾಗೂ ಮೆಡಿಸನ್ ಬಗ್ಗೆ ಅನುಭವವಿರುವವರು ಸಂಪರ್ಕಿಸಿ
70192 49897
97434 47076

**ಬೇಕಾಗಿದ್ದಾರೆ**
1) ಸ್ಟಾಫ್ ನರ್ಸ್
2) OT ಸ್ಟಾಫ್ ನರ್ಸ್
3) ಲೇಬರ್ ವಾರ್ಡ್ ಸ್ಟಾಫ್ ನರ್ಸ್
ಅನುಭವವುಳ್ಳವರಿಗೆ ಆದ್ಯತೆ.
ಮೊ. : 98808 53626

**ಸೈಟ್ ಮಾರಾಟಕ್ಕೆ**
(1/2 ಪರ್ಸೆಂಟ್ ಕಮೀಷನ್ ಗೆ)
ಬೈಪಾಸ್ ನ ಹಳೇ ಬನಶಂಕರಿ ಮತ್ತು ಹೊಸ ಬನಶಂಕರಿ ಬಡಾವಣೆಯಲ್ಲಿ 40x60, 44x70, 80x70, 30x50
ಕಿರಣ್ ಬೂಸ್ನೂರ್ (ಏಜೆಂಟ್)
98440 63409

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
EICHER Tractor Show Room
ITI, Diploma ಅಭ್ಯರ್ಥಿಗಳು ಬೇಕಾಗಿದ್ದಾರೆ. ಡಿ.ಎಲ್ ಮತ್ತು ಬೈಕ್ ಇದ್ದವರಿಗೆ ಆದ್ಯತೆ.
ಶಾರದಾ ಆಟೋಸ್ ದಾವಣಗೆರೆ.
sharadaautosdavanagere@gmail.com
63646 76457

**ಪ್ರವೇಶ ಪ್ರಕಟಣೆ**
D.Pharma PUC Pass Science
Address: Manasa Education Trust
L.K.Complex, 1st Floor, Ashoka Road, 1st Cross, Davangere.
PH : 97402 58276

**ಮನೆ ಬಾಡಿಗೆಗಿದೆ**
3 ಬೆಡ್‌ರೂಂ ಹೊಂದಿರುವ ಸುಸಜ್ಜಿತ ಮನೆ ಮೊದಲನೇ ಮಹಡಿ, ಪಾರ್ಕ್ ಎದುರುಗಡೆ, 2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆಯಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ: 98455 88889

**WANTED TEACHERS**
* B.Sc B.Ed -:Headmiss -01
* B.Sc B.Ed - CBZ - 02
* BA B.Ed Eng. Major - 03
* Clerk, B.Com + Computer - 02
* Computer Teacher - BCA - 02
* Tailoring Experienced - 02
S N PUBLIC SCHOOL
B1: Vijayanagara, opp : RTO Office, Davangere
B2: Jeejamatha Colony, Harihar.
9741746205 / 7349397287

**ಬೇಕಾಗಿದ್ದಾರೆ**
ಅನುಭವವುಳ್ಳ ನರ್ಸ್‌ಗಳು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ.
ಸೂರ್ಯೋದಯ ಹಾಸ್ಪಿಟಲ್
# 310, ಪೆವಿಲಿಯನ್ ರೋಡ್, ಪಿ.ಜೆ. ಎಕ್ಸ್‌ಟೆನ್‌ಷನ್, ದಾವಣಗೆರೆ-577004.
93808 12373, 70194 01728

**ಕೆಲಸಕ್ಕೆ ಬೇಕಾಗಿದ್ದಾರೆ**
S R Construction Office ನಲ್ಲಿ ಹಿಂದಿ ಮಾತನಾಡಬಲ್ಲ ಮತ್ತು Computer Operator ಮಹಿಳೆಯರು ಬೇಕಾಗಿದ್ದಾರೆ. ಸಮಯ:-9.30 ರಿಂದ 5.30
ವಿಳಾಸ: ಇಂಡಸ್ಟ್ರಿಯಲ್ ಏರಿಯಾ, ಲೋಕಿಕೆರೆ ರೋಡ್, ಎಸ್.ಎ. ರವಿಂದ್ರನಾಥ್ ನಗರ, ದಾವಣಗೆರೆ.
08192-295886, 9035220050

**VS Paramedical College**
SSLC ಪಾಸ್/PUC ಪಾಸ್/ಫೇಲ್
Course (DHI)
DIPLOMA HEALTH INSPECTOR
ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
9019580600, 8553278258

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಮನೆಗಳು ಲೀಜ್‌ಗೆ/ ಬಾಡಿಗೆಗೆ ಇವೆ**
ನಗರದ ಹೃದಯ ಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ 1-2ನೇ ಮಹಡಿ, ಪೂರ್ವ ಬಾಗಿಲು ಇರುವ ಮನೆಗಳು ಲೀಸ್‌ಗೆ/ಬಾಡಿಗೆಗಿವೆ.
97417 46205, 84312 55250, 99022 99961

**Franchise Opportunity**
Start Fast growing business in your Area & get Fixed Returns with 2% Royalty bonus of every month. Just Invest get Relax We work for you.
Call for more details :
90089 85112

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 01.09.2021ರ ಬುಧವಾರ ಮತ್ತು 02.09.2021ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**TUTIONS**
From 5th std to 10th std
Bruit Abacus and Vedic maths
M: 97390 66956

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**ಬೇಕಾಗಿದ್ದಾರೆ**
ಶ್ರೀ ಮೈತ್ರಿ ಉಜ್ವಲ ಕೇಂದ್ರ ದಾವಣಗೆರೆ ಇಲ್ಲಿ ಸಮಾಜ ಸೇವಕರ ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳೆಯರಿಗೆ ಮಾತ್ರ ಅವಕಾಶ. ವಿದ್ಯಾರ್ಹತೆ ಪದವೀಧರರು ಅಥವಾ ಸ್ನಾತಕೋತ್ತರ ಪದವೀಧರರು ಸಂಪರ್ಕಿಸಿ
94498 25054

**WANTED LADY TEACHERS**
B.Sc B.Ed - Maths, Science, B.A B.Ed- English, D.Ed-03, Clerk-B. Com with Computer Knowledge
Attractive Salary will be Given to Right Candidates
Contact to Vinayaka Eng Medium High School, Ganesh Pet behind Kalikadevi Temple, Davanagere-01
95356 10817, 88920 07561

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**AVOID MOSQUITOES**
Mosquito Net For Doors & Windowes. Design Boards, ACP, MDF Available.
SRI GOWRI ENTERPRISES
# 7, 4th Cross, Karur Industrial Area. Davangere-6
72049 94628

**ಮನೆ ಲೀಸ್‌ಗೆ ಇದೆ**
ಶಾಮನೂರು-ನಾಗನೂರು ರಸ್ತೆ, 1ನೇ ಕ್ರಾಸ್‌ನಲ್ಲಿ 2 ಬೆಡ್‌ರೂಂ ಇರುವ ನೆಲ ಮಹಡಿ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ
83104 56621

**State Bank of India**
'ಜನ್‌ಧನ್ ಖಾತೆ' ಮಾಡಲಾಗುತ್ತದೆ
(10 ವರ್ಷ ಮೇಲಿನವರಿಗೆ)
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005


**ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
ಫೋ. : 96864 62502

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**JOBS**
MCS ACADEMY
Training & Placement Cell
98444 92888

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

### ನಿವೃತ್ತ ರೈಲ್ವೆ ನೌಕರ ಜೆ. ಶಿವಮೂರ್ತಿ ನಿಧನ



ದಾವಣಗೆರೆ ಸಿಟಿ ಶಾಮನೂರು ಎಸ್.ಎಸ್. ಮಲ್ಲಿಕಾರ್ಜುನ ಬಡಾವಣೆ, ದೇವರಬೆಳೆಕೆರೆ ರಸ್ತೆಯ ವಾಸಿ ರೈಲ್ವೆ ಇಲಾಖೆ ನಿವೃತ್ತ ಒ.ಎಸ್. ಆಗಿದ್ದ **ಶ್ರೀ ಜೆ. ಶಿವಮೂರ್ತಿ** ಅವರು ದಿನಾಂಕ 30.08.2021ರ ಸೋಮವಾರ ಮಧ್ಯಾಹ್ನ 2.20 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 61 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.08.2021ರ ಮಂಗಳವಾರ ಬೆಳಿಗ್ಗೆ 11.30 ಕ್ಕೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

- ದುಃಖತಪ್ತ ಕುಟುಂಬ ವರ್ಗ

ಮೊ. : 8867095781, 8970011644, 9480481070, 8762587602

### ಆವರಗೆರೆ ಹೊಟ್ಟೇರ ನಾಗರತ್ನಮ್ಮ ನಿಧನ



ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ವಾಸಿ ಹೆಚ್.ಸಿ. ಪರಮೇಶ್ವರಪ್ಪ ಅವರ ಧರ್ಮಪತ್ನಿ ಶ್ರೀಮತಿ ಹೊಟ್ಟೇರ ನಾಗರತ್ನಮ್ಮ (41) ಅವರು ದಿನಾಂಕ 30.08.2021ರ ಸೋಮವಾರ ಸಂಜೆ 6.55 ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.08.2021ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಆವರಗೆರೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

### ಸಂಗಪ್ಪಯ್ಯ ಪಟೇಲ್ ನಿಧನ



ದಾವಣಗೆರೆ ಕಿರುವಾಡಿ ಲೇಔಟ್ ನಿವಾಸಿ (ಕಾಟನ್ ಮಿಲ್ ನಿವೃತ್ತ ನೌಕರರು) ರಾಘವೇಂದ್ರ ಆಟೋಮೊಬೈಲ್ಸ್ ನೌಕರರಾಗಿದ್ದ

**ಶ್ರೀ ಸಂಗಪ್ಪಯ್ಯ ಪಟೇಲ್**

ಇವರು ದಿನಾಂಕ ; 30.08.2021ರ ಸೋಮವಾರ ಬೆಳಿಗ್ಗೆ 8.30ಕ್ಕೆ ಲಿಂಗೈಕ್ಯರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು, ಪತ್ನಿ, ಪುತ್ರ, ಪುತ್ರಿ, ಅಳಿಯ, ಮೊಮ್ಮಕ್ಕಳು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಅವರ ಸ್ವಗ್ರಾಮವಾದ ಶಿಕಾರಿಪುರ ತಾಲ್ಲೂಕಿನ ತರಲಘಟ್ಟ ಗ್ರಾಮದ ಅವರ ತೋಟದಲ್ಲಿ ದಿನಾಂಕ ;31.08.2021ರ ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ

99863 25181, 98863 31518

### ಬೂಸ್ನೂರು ಶ್ರೀಮತಿ ಅನ್ನಪೂರ್ಣಮ್ಮ ನಿಧನ



ದಾವಣಗೆರೆ ಚಾಮರಾಜಪೇಟೆ ವಾಸಿ, ಪ್ರಕಾಶ್ ಪ್ರಿಂಟಿಂಗ್ ಪ್ರೆಸ್ಸ್ ಲೇ. ಬೂಸ್ನೂರು ಷಡಾಕ್ಷರಪ್ಪನವರ ಧರ್ಮಪತ್ನಿ

**ಶ್ರೀಮತಿ ಅನ್ನಪೂರ್ಣಮ್ಮ**

*ಇವರು ದಿನಾಂಕ : 30.08.2021ರ ಸೋಮವಾರ ಮಧ್ಯಾಹ್ನ 12.54ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ, ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 31.08.2021ರ ಮಂಗಳವಾರ ಬೆಳಿಗ್ಗೆ 9.00 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸುತ್ತೇವೆ.*

ಇಂತಿ ದುಃಖತಪ್ತ ಕುಟುಂಬ ವರ್ಗ

*ಫೋ. : 82176 74490, 98867 51091, 99804 28355,*

### ಪ್ರಥಮ ವರ್ಷದ ಪುಣ್ಯ ಸ್ಮರಣೆ



**ಶ್ರೀಮತಿ ಕೆ.ಎಂ. ಉಮಾದೇವಿಯವರು, ದಾವಣಗೆರೆ.**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನಿಮ್ಮ ನೆನಪು ನಮಗೆ ಸದಾ ಹಚ್ಚಹಸಿರು, ಸ್ಫೂರ್ತಿದಾಯಕ, ನಿಮ್ಮ ಪ್ರೀತಿ, ಆರೈಕೆ, ನೆನಪುಗಳು ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ...

ಪತಿ : **ಕೆ.ಎಂ. ವೀರಭದ್ರಯ್ಯನವರು**
(ನಿವೃತ್ತ ವ್ಯವಸ್ಥಾಪಕರು, DUCB ಬ್ಯಾಂಕ್, ದಾವಣಗೆರೆ.)
ಹಿರಿಯ ಮಗ : **ಕೆ.ಎಂ. ದಂಡಪಾಣಿ**, ಸೊಸೆ : **ಹೆಚ್.ಬಿ. ಪ್ರಿಯಾಂಕ**
ಕಿರಿಯ ಮಗ : **ಕೆ.ಎಂ.ವಿ. ವಿಜಯರಾಜ್**, ಸೊಸೆ : **ಸ್ಫೂರ್ತಿ ಎಸ್.**
**ಕುರುವಹೊಸಳ್ಳಿ ಮಠದ ವಂಶಸ್ಥರು ಮತ್ತು ಬಂಧು-ಮಿತ್ರರು**

# ಬಿಜೆಪಿ ವಾಲ್ಮೀಕಿ ನಾಯಕ ಸಮಾಜದ ಪರ ಎಂದು ಸಾಬೀತು

**ಹರಪನಹಳ್ಳಿ : ಎಸ್ಟಿ ಘಟಕದ ಉಪಾಧ್ಯಕ್ಷ ಹರ್ತಿಕೋಟಿ ವೀರೇಂದ್ರ ಸಿಂಹ**



ಹರಪನಹಳ್ಳಿ, ಆ.30- ರಾಜ್ಯದ ವಾಲ್ಮೀಕಿ ನಾಯಕ ಸಮಾಜದವರ ಬಹುದಿನಗಳ ಬೇಡಿಕೆಯಾದ ಪರಿಶಿಷ್ಟ ಪಂಗಡದ ಸಚಿವಾಲಯ ಹಾಗೂ ಯಡಿಯೂರಪ್ಪನವರ ಕಾಲಾವಧಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಗೆ ಸರ್ಕಾರಿ ರಜೆ ನೀಡುವ ಮುಖಾಂತರ 4ನೇ ಅತಿ ದೊಡ್ಡ ಸಮಾಜವಾದ ವಾಲ್ಮೀಕಿ ನಾಯಕ ಸಮಾಜದ ಪರವಾಗಿ ಬಿಜೆಪಿ ಇದೆ ಎಂದು ಸಾಬೀತು ಮಾಡಿದೆ ಎಂದು ಬಿಜೆಪಿ ಎಸ್‌ಟಿ ಘಟಕದ ರಾಜ್ಯ ಉಪಾಧ್ಯಕ್ಷ ಹರ್ತಿಕೋಟಿ ವೀರೇಂದ್ರ ಸಿಂಹ ಹೇಳಿದರು.

ಪಟ್ಟಣದ ಬಾಬು ಜಗಜೀವನ್ ರಾಂ ಭವನದಲ್ಲಿ ಬಿಜೆಪಿ ಎಸ್ಟಿ ಮೋರ್ಚಾ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ 77 ಪಾಳೆ ಪಟ್ಟುಗಳಲ್ಲಿ ಹರಪನಹಳ್ಳಿ ಪಾಳೇಗಾರರು ವೀರರು, ಶೂರರಾಗಿದ್ದು, ಹರಪನಹಳ್ಳಿ ತಾಲ್ಲೂಕಿನ ನಿರ್ಣಾಯಕ ಮತದಾರರರು ವಾಲ್ಮೀಕಿ ನಾಯಕರು ಎಂದರೆ ತಪ್ಪಾಗಲಾರದು.

ಬಹುದಿನಗಳ ಬೇಡಿಕೆಯಾದ 7.5 ಮೀಸಲಾತಿ ವಿಚಾರವಾಗಿ ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶೀಘ್ರದಲ್ಲಿ ಮೀಸಲಾತಿ ನೀಡುತ್ತೇವೆ ಎಂದು ಭರವಸೆ ನೀಡಿದ್ದಾರೆ ಎಂದರು.

ಜಿಲ್ಲಾ ಬಿಜೆಪಿ ಎಸ್‌ಟಿ ಘಟಕದ ಅಧ್ಯಕ್ಷ, ಚಲನ ಚಿತ್ರ ನಟ ಬಂಗಾರು ಹನುಂಮತ ಮಾತನಾಡಿ, ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ವಾಲ್ಮೀಕಿ ನಾಯಕ ಜನಾಂಗ ಸುಮಾರು 50 ಸಾವಿರ ಜನಸಂಖ್ಯೆ ಇದ್ದು, ಶೇಕಡ 80 ರಷ್ಟು ಜನರು ಬಿಜೆಪಿಗೆ ಮತ ನೀಡಿದ್ದಾರೆ ಎಂದರು.

ಬಿಜೆಪಿ ತಾಲ್ಲೂಕು ಎಸ್‌ಟಿ ಘಟಕದ ಅಧ್ಯಕ್ಷ ತಳವಾರ ಮನೋಜ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ತಾಲ್ಲೂಕಿನಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ವಾಲ್ಮೀಕಿ ನಾಯಕ ಸಮಾಜದವರು ಶಾಸಕರ ಪರವಾಗಿ ಮತ ನೀಡಿದ್ದಾರೆ. ಮುಂದೆಯು ಸಹ ಅವರ ಜೊತೆಗೆ ಇರುತ್ತೇವೆ ಎಂದರು.

ಬಿಜೆಪಿ ತಾಲ್ಲೂಕು ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್‌ಟಿ ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯ ಟಿ. ನಾಗರಾಜಪ್ಪ ಮಾತನಾಡಿ, ಪಟ್ಟಣದಲ್ಲಿರುವ ವಾಲ್ಮೀಕಿ ಸಮುದಾಯ ಭವನ ಪೂರ್ಣಗೊಳಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡೋಣ ಎಂದರು.

ತಾಲ್ಲೂಕು ಬಿಜೆಪಿ ಕಾರ್ಯದರ್ಶಿಗಳಾದ ಉದಯಕುಮಾರ ಹಾಗೂ ಬಸವರಾಜ ಮಾತನಾಡಿದರು.

ಸಭೆಯಲ್ಲಿ ಬಿಜೆಪಿ ತಾಲ್ಲೂಕು ಎಸ್‌ಟಿ ಘಟಕದ ಕಾರ್ಯದರ್ಶಿ ನಾಗರಾಜ ರಾಂಪುರ, ಪುರಸಭೆ ಸದಸ್ಯ ದ್ಯಾಮಜ್ಜಿ ರೊಕ್ಕಪ್ಪ, ಮುಖಂಡರುಗಳಾದ ಎಚ್.ಟಿ. ಗಿರೀಶಪ್ಪ, ದ್ಯಾಪನಾಯಕನಹಳ್ಳಿ ಜಿ.ಕೆ. ಬಸವರಾಜ, ಕೆ.ಎಂ. ಪ್ರಾಣೇಶ್, ದಾದಾಪುರದ ಶಿವಾನಂದ, ನೀಲಗುಂದ ತಿಮ್ಮೇಶ, ಜೋಗಿ ಬಸವರಾಜ, ನಂದಿಬೇವೂರು ರಾಜಪ್ಪ, ಆಲೂರು ಶ್ರೀನಿವಾಸ್, ಕಡತಿ ರಮೇಶ್, ಚೌಡಾಪುರದ ಷಣ್ಮುಖಪ್ಪ ಇನ್ನಿತರರಿದ್ದರು.

# ಸದಾಶಿವ ಆಯೋಗದ ವರದಿ ಬಹಿರಂಗಕ್ಕೆ ಒತ್ತಾಯ

**ಮಾದಿಗ ದಂಡೋರ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಮಾದಾರ ಚನ್ನಯ್ಯ ಗುರು ಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ**




ದಾವಣಗೆರೆ, ಆ.30- ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಈಗಲಾದರೂಬಹಿರಂಗಪಡಿಸಬೇಕು.ಇಲ್ಲವೇ ಚರ್ಚೆಗೆ ಅವಕಾಶ ಕೊಡಬೇಕು ಎಂದು ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಗರದ ಶಾಂತಿ ರಾಯಲ್ ಹೋಟೆಲ್ ಸಭಾಂಗಣದಲ್ಲಿ ಇಂದು ನಡೆದ ಮಾದಿಗ ದಂಡೋರ ರಾಜ್ಯ ಸಮಿತಿ ಪದಾಧಿಕಾರಿಗಳು, ಜಿಲ್ಲೆಗಳ ಅಧ್ಯಕ್ಷರ ಕಾರ್ಯಕಾರಿಣಿ ಸಭೆಯಲ್ಲಿ ಶ್ರೀಗಳು ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸರ್ಕಾರವು ನ್ಯಾಯಮೂರ್ತಿ ಎ.ಜೆ. ಸದಾಶಿವ ವರದಿ ಕೊಟ್ಟ ನಂತರ ಬಹಿರಂಗ ಮಾಡದಿದ್ದರಿಂದ ಮಾದಿಗ ಸಮುದಾಯಕ್ಕೆ ಬಹಳಷ್ಟು ಅನುಕೂಲ ಇದೆ. ನಮಗೆ ಅನಾನು ಕೂಲ ಮಾಡಲಾಗಿದೆ ಎಂಬ ಭಾವನೆಗಳು ನಮ್ಮ ಅನ್ಯ ಸಹೋದರ ಸಮುದಾಯಗಳ ತಲೆಯಲ್ಲಿ ಬಂದಿತು. ಸರ್ಕಾರ ವರದಿ ಬಂದ ನಂತರ ಬಹಿರಂಗಪಡಿಸಿದ್ದರೆ ಅಥವಾ ಚರ್ಚೆಗೆ ಅವಕಾಶ ಕೊಟ್ಟಿದ್ದರೆ, ಅನ್ಯ ಸಮುದಾಯಗಳಲ್ಲಿ ಈಗ ಉದ್ಭವಿಸಿರುವ ಭಾವನೆಗಳು ಇರುತ್ತಿರಲಿಲ್ಲ. ಆದ್ದರಿಂದ ಈ ವರದಿಯಲ್ಲಿನ ವಿಷಯಗಳ ಸಾಧಕ-ಬಾಧಕ ತಿಳಿಯುವಂತಾಗಲು ಚರ್ಚೆ ನಡೆಯಲಿ ಎಂದು ಅಭಿಪ್ರಾಯಪಟ್ಟರು.

ವಿಧಾನಸಭೆಯಲ್ಲಿ ನಮ್ಮ ಸಮಾಜದ ಆರು ಜನರು ಬುದ್ಧಿವಂತಿಕೆಯಿಂದ ಶಾಸಕರಾಗಿದ್ದಾರೆ. ಅವರುಗಳು ಉಲ್ಟಾ ಪಲ್ಟಾ ಮಾತನಾಡಿಕೊಂಡು ಹೋದರೆ ಇರುವ ಸ್ಥಾನಗಳು ಕಡಿಮೆ ಆಗುತ್ತವೆ ಅನ್ನುವುದನ್ನು ಸಮಾಜದ ಜನ ಅರ್ಥ ಮಾಡಿಕೊಳ್ಳಬೇಕು. ಜನಪ್ರತಿನಿಧಿಗಳು ಸಹ ಹೋರಾಟಗಾರರ ಜೊತೆಗೆ ಇದ್ದಾರೆ. ಈ ವಿಚಾರವಾಗಿ ಹೋರಾಟ ನಡೆಸುತ್ತಿರುವ ಎಲ್ಲಾ ಸಂಘಟನೆಗಳು ಒಗ್ಗಟ್ಟಿನಿಂದ ಬರಬೇಕು ಎಂದು ಹೇಳಿದರು.

ನಮ್ಮ ಸಮುದಾಯ ಮೀಸಲಾತಿಯನ್ನು ನೆಚ್ಚಿಕೊಂಡು ಶಿಕ್ಷಣ ಮತ್ತು ಉದ್ಯೋಗ ಬಯಸುತ್ತಿದೆ. ಆದರೆ, ಬೇರೆ ಸಮುದಾಯಗಳು ಔದ್ಯೋಗಿಕವಾಗಿ ಬೆಳೆದಿವೆ. ಆದ್ದರಿಂದ ನಾವೂ ಈ ಮೀಸಲಾತಿಯನ್ನು ನೆಚ್ಚಿಕೊಳ್ಳದೆ ಸ್ವಾವಲಂಬಿಗಳಾಗಿ ಬದುಕಲು ಉದ್ಯಮಗಳಿಗೆ ಕೈ ಹಾಕಬೇಕು. ನಮ್ಮ ಕುಲಕಸುಬಾಗಿರುವ ಚಮ್ಮಾರಿಕೆಯನ್ನು ಮೇಲ್ದರ್ಜೆಗೆ ಏರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವರ್ಗೀಕರಣ ತಾರ್ಕಿಕ ಅಂತ್ಯ ಕಾಣುತ್ತೆ ಅನ್ನುವ ಸಂದರ್ಭದಲ್ಲಿ ಪರಿಶಿಷ್ಟ ವರ್ಗಗಳು ಮೀಸಲಾತಿ ಹೆಚ್ಚಳ, ಹಿಂದುಳಿದ ವರ್ಗಗಳು ಪರಿಶಿಷ್ಟ ಜಾತಿ, ಪಂಚಮಸಾಲಿ ಸಮಾಜ 2ಎ, ಯಾದವರು ನಮಗೆ ಎಸ್ಟಿಗೆ ಸೇರಿಸಬೇಕು ಎಂದು ಎಲ್ಲ ಸಮುದಾಯಗಳು ಹೋರಾಟಗಳನ್ನು ಪ್ರಾರಂಭಿಸಿದವು. ಇದು ಸರ್ಕಾರಕ್ಕೆ ಒಂದು ರೀತಿ ಜೇನುಗೂಡು ಆಯಿತು. ನಾವೇಕೆ ಜೇನುಗೂಡಿಗೆ ಕಲ್ಲು ಹೊಡೆಯಬೇಕು ಅನ್ನುವ ಭಾವನೆ ಸರ್ಕಾರದಲ್ಲಿ ಮೂಡಿದೆ. ಅದರ ಮಧ್ಯೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈಗಿನ ಸಿಎಂ ಬಸವರಾಜ ಬೊಮ್ಮಾಯಿ ಮತ್ತು ಸಂಘ ಪರಿವಾರಕ್ಕೆ ಮೀಸಲಾತಿ ವರ್ಗೀಕರಣಕ್ಕೆ ಬಾಹ್ಯ ಬೆಂಬಲ ಕೊಡುವರಿದ್ದಾರೆ. ಪರಿಸ್ಥಿತಿ ಸೂಕ್ಷ್ಮ ಆಗಿರುವುದರಿಂದ ನಿರ್ಧಾರ ಕೈಗೊಳ್ಳಲು ಕಾಲಾವಕಾಶಕ್ಕಾಗಿ ಕಾಯುತ್ತಿದ್ದಾರೆ. ಆದರೂ ಕೇಂದ್ರ ಸಚಿವ ಎ. ನಾರಾಯಣ ಸ್ವಾಮಿ, ಸಚಿವ ಗೋವಿಂದ ಕಾರಜೋಳ, ನಮ್ಮ ಶಾಸಕರು ಎಲ್ಲರೂ ಮುಖ್ಯಮಂತ್ರಿ ಮೇಲೆ ಒತ್ತಡ ಹಾಕುತ್ತಿದ್ದಾರೆ. ಇದು ಬೇಗನೆ ಅಂತ್ಯ ಕಾಣಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಾನ್ನಿಧ್ಯ ವಹಿಸಿ ಮಾತನಾಡಿದ ಕೋಡಿಹಳ್ಳಿ ಆದಿಜಾಂಬವ ಗುರುಪೀಠದ ಶ್ರೀ ಷಡಕ್ಷರಮುನಿ ಸ್ವಾಮೀಜಿ, ಸದಾಶಿವ ಆಯೋಗದ ವರದಿ ಜಾರಿ ಮಾಡಲು ಹಿಂದೆ ಪಾದಯಾತ್ರೆ ಮಾಡಲು ಹೊರಟಿದ್ದಾಗ, ಸಮಾಜದಲ್ಲಿ ಒಡಕು ಉಂಟಾಯಿತು. ಹೋರಾಟದ ಶಕ್ತಿ ಕುಂದಿಸಬಾರದು. ಪಾದಯಾತ್ರೆಗೆ ಹಣ ಬೇಕಿಲ್ಲ, ಒಳ್ಳೆಯ ಮನಸ್ಸು ಇದ್ದರೆ ಸಾಕು. ಸಮಾಜ ಮತ್ತು ಸ್ವಾಮೀಜಿಗಳಲ್ಲೂ ಒಗ್ಗಟ್ಟಿಲ್ಲ. ಎಲ್ಲಾ ಸ್ವಾಮೀಜಿಗಳನ್ನು ಒಂದೇ ವೇದಿಕೆಗೆ ತರುವಂತಹ ಕೆಲಸ ಆಗಬೇಕು. ಜನಪ್ರತಿನಿಧಿಗಳು ಅಧಿಕಾರದ ಹಂಗಿನಿಂದ ಹೊರ ಬಂದು ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಮಾದಿಗ ದಂಡೋರದ ರಾಜ್ಯಾಧ್ಯಕ್ಷ ಬಿ. ನರಸಪ್ಪ ದಂಡೋರ, ರಾಜ್ಯ ಮಹಾಪ್ರಧಾನ ಕಾರ್ಯದರ್ಶಿ ಜೆ.ಎಂ.ದೇವರಾಜ, ಎಂ. ಸಿ.ಶ್ರೀನಿವಾಸ, ಎಚ್.ರಂಗನಾಥ್, ಸಮಾಜದ ಮುಖಂಡ ಬಿ.ಹೆಚ್. ವೀರಭದ್ರಪ್ಪ ಸೇರಿದಂತೆ ಇತರರು ಇದ್ದರು.

# ನಗರಕ್ಕೆ ಇಂದು ಕ್ರೀಡಾ ಸಚಿವ ಡಾ. ನಾರಾಯಣಗೌಡ

ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಮಧ್ಯಾಹ್ನ 3.15 ಕ್ಕೆ ನಗರಕ್ಕೆ ಆಗಮಿಸುವ ಸಚಿವರು, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಏರ್ಪಡಿಸಿರುವ ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ರೇಷ್ಮೆ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು. ಸಂಜೆ 5 ಗಂಟೆಗೆ ಜಿಲ್ಲಾ ಕ್ರೀಡಾಂಗಣಕ್ಕೆ ಮತ್ತು ಕ್ರೀಡಾ ವಸತಿ ನಿಲಯಕ್ಕೆ ಭೇಟಿ ನೀಡುವರು. ಸಂಜೆ 6 ಗಂಟೆಗೆ ಪಕ್ಷದ ಜಿಲ್ಲಾ ಕಚೇರಿಗೆ ಭೇಟಿ ನೀಡಿ ಕಾರ್ಯಕರ್ತರು, ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸುವರು.

# ನಿವೇಶನಗಳ ಬೇಡಿಕೆ ಸಮೀಕ್ಷೆ ನೋಂದಣಿಗೆ ದಿನಾಂಕ ವಿಸ್ತರಣೆ

ದಾವಣಗೆರೆ ಆ.30 - ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ವಸತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ನಿವೇಶನಗಳ ಬೇಡಿಕೆ ಸಮೀಕ್ಷೆಗೆ ನೋಂದಣಿ ಶುಲ್ಕ ಪಾವತಿಸಿಕೊಳ್ಳಲು ಪ್ರಾಧಿಕಾರದ ವತಿಯಿಂದ ಬೇಡಿಕೆ ಸಮೀಕ್ಷೆ ದಿನಾಂಕವನ್ನು ಸೆಪ್ಟೆಂಬರ್ 4 ರವರೆಗೆ ವಿಸ್ತರಿಸಲಾಗಿದೆ.

ಸೆ.2 ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಿಲ್ಲೆಗೆ ಆಗಮಿಸುತ್ತಿದ್ದಾರೆ. ಕಾರಣ, ಆರಕ್ಷಕ, ಅಧಿಕಾರಿ, ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ಬಂದೋಬಸ್ತ್ ಗೆ ನಿಯೋಜನೆಗೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಅಂದು ಪ್ರಾಧಿಕಾರದಲ್ಲಿ ನೋಂದಣಿ ಶುಲ್ಕ ಪಾವತಿಸಿಕೊಳ್ಳಲಾಗುವುದಿಲ್ಲ ಎಂದು ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ ತಿಳಿಸಿದ್ದಾರೆ.

# ಸಂಕ್ಲೀಪುರದಲ್ಲಿ ಬಸವಣ್ಣನ ಕಾರಣಿಕ



ಮಲೇಬೆನ್ನೂರು, ಆ.30- ಸಂಕ್ಲೀಪುರ ಗ್ರಾಮದ ಮೂಕಬಸವಣ್ಣ ದೇವರ ಸಮ್ಮುಖದಲ್ಲಿ ಶ್ರಾವಣ ಮಾಸದ ಕಡೆ ಸೋಮವಾರ ಪ್ರಯುಕ್ತ ಮಲ್ಲನಾ ಯ್ಕನಹಳ್ಳಿ ಗ್ರಾಮದಲ್ಲಿ ಬಸವೇಶ್ವರ ದೇವರ ಕಾರಣಿಕ ಜರುಗಿತು. 'ತಾಯಿ ಮಡಿಲಿಗೆ ಅಮೃತ ಚೆಲ್ಲೀತಲೇ ಪರಾಕ್' ಎಂದು ಬಸವೇಶ್ವರ ದೇವರ ಪೂಜಾರಪ್ಪ ಕಾರಣಿಕ ನುಡಿದರು. ಕಾರಣಿಕ ಕೇಳಲು ಸಂಕ್ಲೀಪುರ, ಮಲ್ಲನಾಯ್ಕನಹಳ್ಳಿ ಗ್ರಾಮಸ್ಥರು ಸೇರಿದ್ದರು.

# ಸೆ.2 ರಂದು ಅಧಿಕಾರಿಗಳು, ನೌಕರರು ರಜೆ ಮೇಲೆ ತೆರಳದಂತೆ ಜಿಲ್ಲಾಧಿಕಾರಿ ಬೀಳಗಿ ಸೂಚನೆ

ದಾವಣಗೆರೆ, ಆ.30- ಸೆಪ್ಟೆಂಬರ್ 2 ರಂದು ಮುಖ್ಯಮಂತ್ರಿ ಹಾಗೂ ಕೇಂದ್ರ ಗೃಹ ಸಚಿವರು ಜಿಲ್ಲಾ ಪ್ರವಾಸ ಕೈಗೊಂಡಿರುವ ಕಾರಣ ಅಧಿಕಾರಿಗಳು, ನೌಕರರು ಯಾವುದೇ ರಜೆಯ ಮೇಲೆ ತೆರಳಬಾರದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಜಿಲ್ಲಾ ಪ್ರವಾಸ ಮುಗಿಯುವವರೆಗೂ ಯಾವುದೇ ಅಧಿಕಾರಿಗಳು, ನೌಕರರು ರಜೆಯ ಮೇಲೆ ತೆರಳಬಾರದು. ಅಧಿಕಾರಿ ಮತ್ತು ನೌಕರರು ಕಚೇರಿ ಕೆಲಸದ ಸಮಯಕ್ಕೆ ಸರಿಯಾಗಿ ಹಾಜರಾಗಿ ಕರ್ತವ್ಯ ನಿರ್ವಹಿಸಬೇಕು.

ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು, ಮೇಲಾಧಿಕಾರಿಗಳು ತಿಳಿಸುವ ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು. ತಪ್ಪಿದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದ್ದಾರೆ.

# ಯಾದವ ಸಮಾಜದ ಸಮುದಾಯ ಭವನಕ್ಕೆ 10 ಲಕ್ಷ ರೂ. ಅನುದಾನ



ಜಗಳೂರು, ಆ.30- ಯಾದವ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಹತ್ತು ಲಕ್ಷ ರೂ. ಅನುದಾನ ನೀಡುವುದಾಗಿ ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು.

ಅವರು ಸ್ಥಳೀಯ ಮಿನಿ ವಿಧಾನ ಸೌಧದಲ್ಲಿ ತಾಲ್ಲೂಕು ಆಡಳಿತದಿಂದ ಸರಳವಾಗಿ ಹಮ್ಮಿಕೊಂಡಿದ್ದ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಮರೇನಹಳ್ಳಿ ಗ್ರಾಮದ ರಸ್ತೆಯಲ್ಲಿ ಸಮತಟ್ಟಾದ ಒಂದು ಎಕರೆ ಜಮೀನನ್ನು ಮಂಜೂರು ಮಾಡಿಸಿರುತ್ತೇನೆ. ಇಲ್ಲಿ ಸುಸಜ್ಜಿತ ಭವನವಾಗಲಿ ಎಂದ ಶಾಸಕರು, ಸಮಾಜಕ್ಕೆ ನಾನು ನೀಡಿದ ಭರವಸೆಯನ್ನು ಈಡೇರಿಸಿರುತ್ತೇನೆ ಎಂದರು.

ಈ ಸಂದರ್ಭದಲ್ಲಿ ಯಾದವ ಸಮಾಜದ ಅಧ್ಯಕ್ಷ ಜಿ.ಸಿ. ಕೃಷ್ಣಮೂರ್ತಿ, ಕಾರ್ಯದರ್ಶಿ ಹಾಲಸ್ವಾಮಿ, ಮುಖಂಡರಾದ, ತಿಪ್ಪೇಸ್ವಾಮಿ ಗೌಡ, ಶಶಿಧರ್, ಸುಂಕಪ್ಪ, ಇಂದ್ರೇಶ್, ಜೀವಣ್ಣ, ತಿಪ್ಪೇಸ್ವಾಮಿ, ಮಹಾಲಿಂಗಪ್ಪ, ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಬಿಸ್ತುವಳ್ಳಿ ಬಾಬು, ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ ಇನ್ನಿತರೆ ಅಧಿಕಾರಿಗಳು ಪಾಲ್ಗೊಂಡಿದ್ದರು.

# ಗಾಳಿಗೆ ತೂರುತ್ತಿರುವ ಧಾರ್ಮಿಕ ಭಾವನೆ, ಮಾನವೀಯ ಮೌಲ್ಯಗಳು



ದಾವಣಗೆರೆ, ಆ.30- ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಲ್ಲಿ ಗ್ರಾಮೀಣ ಬಡ ಕಲಾವಿದರ ಪಾತ್ರ ಹಿರಿದು. ಸರ್ಕಾರ ಅವರನ್ನು ಗುರುತಿಸಿ, ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಚನ್ನಗಿರಿ ಹಿರೇಮಠದ ಶ್ರೀ ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ ಮುಕ್ತಕಂಠದಿಂದ ಪ್ರಶಂಸಿಸಿದರು.

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘ (ದಾವಣಗೆರೆ) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ 75 ನೇ ಸ್ವಾತಂತ್ರ್ಯೋತ್ಸವದ ಸವಿನೆನಪಿಗಾಗಿ ಇಂದು ಆಯೋಜನೆಗೊಂಡಿದ್ದ ಎರಡು ದಿನಗಳ ರಂಗ ಕಾರ್ಯಾಗಾರ, ಮೂಡಲಪಾಯ, ಬಯಲಾಟ ಉತ್ಸವ ಹಾಗೂ ಗ್ರಾಮೀಣ ಕಲಾವಿದರ ಸನ್ಮಾನ ಸಮಾರಂಭದ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ದುರ್ನೀತಿ, ದುರ್ನಡತೆ, ದುರ್ಬುದ್ಧಿ, ದುರಾಸೆಗಳೇ ಹೆಚ್ಚಾಗಿ ವಿಜೃಂಭಿಸುತ್ತಿರುವ ನಾಜೂಕಿನ ಈ ಪ್ರಪಂಚದಲ್ಲಿ ಧಾರ್ಮಿಕ ಭಾವನೆಗಳು, ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಲಾಗಿದೆ ಎಂದು ವಿಷಾದಿಸಿದರು.

ದೇಶದ ಸಂಸ್ಕೃತಿ, ಪರಂಪರೆ, ಮಾನವೀಯ ಮೌಲ್ಯಗಳು ಏನಾದರೂ ಉಳಿದಿದ್ದರೆ ಅದು ಗ್ರಾಮೀಣ ಬಡ ಕಲಾವಿದರಲ್ಲಿ ಮಾತ್ರ. ಆದರೆ ಅಂತಹ ಕಲಾವಿದರು ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿದ್ದಾರೆ ಎಂದರು.

ಕಳೆದ ಎರಡು ದಶಕಗಳಿಂದ ನಿರಂತರವಾಗಿ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಕಾರ್ಯ ಹಾಗೂ ಸಂಘದ ಅಧ್ಯಕ್ಷ ಎನ್.ಎಸ್. ರಾಜು ಅವರ ಸಮಾಜ ಸೇವೆ ಅನನ್ಯವಾದುದು. ಅವರು ಬಯಲಾಟ ಅಕಾಡೆಮಿಯ ಸದಸ್ಯರಾಗಿದ್ದು, ಮುಂದೆ ಅಧ್ಯಕ್ಷರಾಗಿ ಇನ್ನೂ ಹೆಚ್ಚಿನ ಸೇವೆಯಲ್ಲಿ ತೊಡಗಲಿ ಎಂದು ಶ್ರೀಗಳು ಆಶಿಸಿದರು.

ರಂಗ ತಜ್ಞ ಮೈಸೂರಿನ ಪಾಪು ಶ್ರೀನಿವಾಸ ಅವರು ಮದ್ದಳೆ ಭಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಜಾನಪದ, ರಂಗಭೂಮಿ, ಬಯಲಾಟ, ದೊಡ್ಡಾಟ ಮುಂತಾದ ಗ್ರಾಮೀಣ ಕಲಾ ಪ್ರಾಕಾರಗಳನ್ನು ಒಳಗೊಂಡ ಕಲಾ ಕ್ಷೇತ್ರ ಕೂಡ ಮುದ್ರಣ ಮತ್ತು ದೃಶ್ಯ ಮಾಧ್ಯಮದಷ್ಟೇ ಪ್ರಬಲ ಮಾಧ್ಯಮ ಎಂದು ಪ್ರತಿಪಾದಿಸಿದರು.

ಕಲಾವಿದರು ಸಮಾಜದ ಪಾಲುದಾರರು ಕೂಡ ಹೌದು. ಅವರು ಮನುಷ್ಯ ಸಂಬಂಧಗಳನ್ನು ನಿರಂತರವಾಗಿ ಬೆಸೆಯುವ ಕೆಲಸ ಮಾಡುತ್ತಾ ಬಂದಿದ್ದಾರೆ. ಕಲಾವಿದರು ಕಪಟಿಗಳಲ್ಲ. ನಿಷ್ಕಲ್ಮಶ ಮನಸ್ಸುಳ್ಳವರಾಗಿದ್ದು, ಅವರು ಕೂಡಿಸುವ ಮಂದಿಯೇ ಹೊರತು, ಕಾಡುವ ಮಂದಿಯಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಜಾಗತೀಕರಣ ವ್ಯವಸ್ಥೆಯಲ್ಲಿ ಹೆಚ್ಚು ಶೋಷಣೆಗೊಳಗಾಗುತ್ತಿರುವವರು ರೈತರು ಮತ್ತು ಕಲಾವಿದರು. ಕೋವಿಡ್ ನಿಂದಾಗಿ ಕಲಾವಿದರ ಸ್ಥಿತಿ ಶೋಚನೀಯವಾಗಿದ್ದರೂ ಸಹ ಸರ್ಕಾರ ಅವರ ನೆರವಿಗೆ ಧಾವಿಸದಿರುವುದು ತುಂಬಾ ನೋವಿನ ಸಂಗತಿ ಎಂದರು.

ರಾಜ್ಯ ರೈತ ಸಂಘದ ಉಪಾಧ್ಯಕ್ಷರೂ, ಹಿರಿಯ ಕಲಾವಿದರಾದ ಚಳ್ಳಕೆರೆಯ ಕೆ.ಪಿ. ಭೂತಯ್ಯ, ರಂಗ ಸಂಘಟಕ ಬೆಂಗಳೂರಿನ ಸಿ.ಎಂ. ಸುರೇಶ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ನಾಟಕ ಅಕಾಡೆಮಿ ಸದಸ್ಯೆ ಕೊಡಗಿನ ಶ್ರೀಮತಿ ರಾಧ ಮಾತನಾಡಿದರು. ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಬಿ. ವಾಮದೇವಪ್ಪ ಮತ್ತಿತರರು ಉಪಸ್ಥಿತರಿದ್ದರು.

ಕಲಾವಿದ ಕತ್ತಿಗೆ ಪರಮೇಶ್ವರಪ್ಪ ಪ್ರಾರ್ಥಿಸಿದರು. ಸದಾನಂದ ಕುಂಬಳೂರು ನಿರೂಪಿಸಿದರು. ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ಎನ್.ಎಸ್. ರಾಜು ಸ್ವಾಗತಿಸಿದರು.

# ಶಿಕ್ಷಣದಲ್ಲಿ ಹಿಂದುಳಿದವರವನ್ನು ಗುರ್ತಿಸಿ, ಮುಂದೆ ತರಲು ಪ್ರಯತ್ನಿಸುವವನೇ ನಿಜವಾದ ಗುರು : ಸುಮತಿ ಜಯಪ್ಪ ವಿಶ್ಲೇಷಣೆ



ಮಲೇಬೆನ್ನೂರು, ಆ.30- ಶಿವ ಸ್ವರೂಪಿಯಾಗಿ, ಕ್ಷ-ಕಿರಣೋಪಾದಿಯಲ್ಲಿ ಕರ್ಮ ಎಸಗುವವನೇ ನಿಜವಾದ ಶಿಕ್ಷಕ ಎಂದು ಉಪನ್ಯಾಸಕರಾದ ಶ್ರೀಮತಿ ಸುಮತಿ ಜಯ್ಯಪ್ಪ ವಿಶ್ಲೇಷಿಸಿದರು.

ಕುಂಬಳೂರು ಗ್ರಾಮದ ಬಸವ ಗುರುಕುಲ ವಿದ್ಯಾಸಂಸ್ಥೆಯ ಶರಣ ಬಿ. ಪುಟ್ಟಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿರುವ ಹನುಮಂತಪ್ಪ ಜಾಡರ್ ಮತ್ತು ಸಿ. ಮಾಲತೇಶ್ ಅವರುಗಳಿಗೆ ಶಾಲೆಯ ಹಿರಿಯ ವಿದ್ಯಾರ್ಥಿಗಳು ನಿನ್ನೆ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಕನಾದವನು ವಿದ್ಯಾರ್ಥಿಗಳನ್ನು ತಾರತಮ್ಯ ಭಾವದಿಂದ ನೋಡದೆ ಎಲ್ಲಾ ವಿದ್ಯಾರ್ಥಿಗಳು ನನ್ನ ಮಕ್ಕಳಿದ್ದಂತೆ ಎಂದುಕೊಂಡು ಸೇವೆ ಸಲ್ಲಿಸಿದಾಗ ಮಾತ್ರ ಆ ವ್ಯಕ್ತಿಗೊಂದು ಗೌರವ ಸಿಗಲು ಸಾಧ್ಯವಾಗುತ್ತದೆ. ಅಂತಹ ಕೆಲಸವನ್ನು ಹನುಮಂತಪ್ಪ ಜಾಡರ್, ಮಾಲತೇಶ್ ಶಿಕ್ಷಕರು ಮಾಡಿದ್ದಾರೆ ಎಂಬುದು ಸಾಬೀತಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಹೊಟ್ಟೆ ಪಾಡಿಗಾಗಿ ಶಿಕ್ಷಕನಾಗಿದ್ದೇನೆಂದುಕೊಂಡು ಕಾಟಾಚಾರಕ್ಕೆ ಕೆಲಸ ಮಾಡುವವನು ನಿಜವಾದ ಶಿಕ್ಷಕನಲ್ಲ. ತನ್ನ ವೃತ್ತಿ ಮತ್ತು ತಾನು ಬೋಧಿಸುವ ವಿಷಯ ಹಾಗೂ ವಿದ್ಯಾರ್ಥಿಗಳನ್ನು ಪ್ರೀತಿಸಿದಾಗ ಮಾತ್ರ ಅವನೊಬ್ಬ ಶ್ರೇಷ್ಠ ಶಿಕ್ಷಕನಾಗಲು ಸಾಧ್ಯವಾಗುತ್ತದೆ ಎಂದು ಸುಮತಿ ಪ್ರತಿಪಾದಿಸಿದರು.

ಮಕ್ಕಳನ್ನು ಹುರಿದುಂಬಿಸಿ, ಪ್ರೇರೇಪಿಸಿ, ಸ್ಫೂರ್ತಿ ತುಂಬುವವನು ಬೆಸ್ಟ್ ಟೀಚರ್ ಆಗಿರುತ್ತಾನೆ. ಶಿಕ್ಷಕರಾದವರು ಜಾಣ ಮಕ್ಕಳನ್ನು ಮಾತ್ರ ಗುರ್ತಿಸಿ, ಗೌರವಿಸಿದರೆ ಸಾಲದು. ಶಿಕ್ಷಣದಲ್ಲಿ ಹಿಂದುಳಿದರವನ್ನು ಗುರ್ತಿಸಿ, ಅವರನ್ನು ಮುಂದೆ ತರಲು ಪ್ರಯತ್ನಿಸುವವನೇ ನಿಜವಾದ ಗುರುವಾಗಿರುತ್ತಾನೆ ಎಂದು ಅವರು ಅಭಿಪ್ರಾಯಪಟ್ಟರು.

ಗುರುವಂದನೆ ಸ್ವೀಕರಿಸಿದ ನಿವೃತ್ತ ಶಿಕ್ಷಕರಾದ ಹನುಮಂತಪ್ಪ ಜಾಡರ್ ಮತ್ತು ಸಿ. ಮಾಲತೇಶ್ ಮಾತನಾಡಿ, ನೀವು ತೋರಿಸಿದ ಪ್ರೀತಿ, ಅಭಿಮಾನದಿಂದಾಗಿ ನಮ್ಮ ಜೀವನವೇ ಪಾವನವಾಗಿದೆ. ನಾವು ಹೇಳಿಕೊಟ್ಟ ಶಿಕ್ಷಣ, ಸಂಸ್ಕಾರ ಹಾಗೂ ಸಂಸ್ಕೃತಿ ಕಲಿತು ಇವತ್ತು ಪ್ರತಿಯೊಬ್ಬರೂ ಉತ್ತಮ ಪ್ರಜೆಗಳಾಗಿರುವುದನ್ನು ನೋಡಿ ಖುಷಿಯಾಗಿ ಮಾತೇ ಬರದಂತಾಗಿದೆ ಎಂದು ಕಣ್ತುಂಬಿಕೊಂಡರು.

ಶಾಲೆಯ ಮುಖ್ಯ ಶಿಕ್ಷಕ ಕೆ. ಶಿರಸಾಚಾರ್ ಅಧ್ಯಕ್ಷತೆ ವಹಿಸಿದ್ದರು. ಶರಣ ಸಂಗಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಸಪ್ಪ ಶಿವಪ್ಪ ಗುಂಡಣ್ಣ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಹಿರಿಯ ವಿದ್ಯಾರ್ಥಿ ಬಿ.ಹೆಚ್. ಕಿರಣ್ ಕುಮಾರ್, ಶಿಕ್ಷಕರಾದ ಹನುಮಂತಪ್ಪ ಜಾಡರ್, ಮಾಲತೇಶ್ ಮತ್ತು ಶಿರಸಾಚಾರ್ ಅವರು ಕೆತ್ತನೆ ಮಾಡಿದ ಸುಂದರ ಮೂರ್ತಿಗಳಾಗಿ ನಾವು ಇಂದು ಇದ್ದೇವೆ ಎಂದು ಧನ್ಯವಾದ ಹೇಳಿದರು. ಹಿರಿಯ ವಿದ್ಯಾರ್ಥಿಗಳಾದ ಹರೀಶ್ ಹನುಮಂತಪ್ಪ ಜಾಡರ್ ಹಾಗೂ ಅವಿನಾಶ್ ಮಾಲತೇಶ್ ಅವರ ಪರಿಚಯವನ್ನು ಮಾಡಿ, ಸಂಬಳ ಇಲ್ಲದೆ ಸೇವೆ ಸಲ್ಲಿಸಿದ ಇಂತಹ ಶಿಕ್ಷಕರಿಂದಾಗಿ ನಾವೆಲ್ಲರೂ ಇಂದು ಕೈ ತುಂಬಾ ಸಂಬಳ ತೆಗೆದುಕೊಳ್ಳುವಂತಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು.

ಗ್ರಾ.ಪಂ. ಅಧ್ಯಕ್ಷೆ ಶೋಭಾ ಶಿವಕುಮಾರ್, ಸದಸ್ಯರಾದ ಎನ್. ಕಲ್ಲೇಶ್, ಹರೀಶ್, ನಾಗೇಂದ್ರ, ತಾ.ಪಂ. ಮಾಜಿ ಅಧ್ಯಕ್ಷ ಆದಾಪುರ ವೀರಭದ್ರಪ್ಪ, ಗ್ರಾಮದ ಮುಖಂಡರಾದ ಕೆ. ತೀರ್ಥಪ್ಪ, ಹುಲ್ಲುಮನಿ ನಿಂಗಪ್ಪ, ಹಳೇಮನಿ ಶಂಭುಲಿಂಗಪ್ಪ, ಕೊಂಡಜ್ಜಿ ಹನುಮಂತಪ್ಪ, ನಿವೃತ್ತ ಶಿಕ್ಷಕ ಗಂಗಪ್ಪ, ಶಿಕ್ಷಕರಾದ ಕುಮಾರ್, ಭೀಮಪ್ಪ, ಸುರೇಶ್, ಯುವ ಮುಖಂಡ ಎಂ. ವಾಸುದೇವ ಮೂರ್ತಿ, ಹಿರಿಯ ವಿದ್ಯಾರ್ಥಿಗಳಾದ ಎಂ.ಪಿ. ಸಂತೋಷ್, ನಂದಕುಮಾರ್ ಪಾಟೀಲ್, ಬಿ.ಜಿ. ನಿರಂಜನ್, ಶಾಮನೂರಿನ ಗ್ಯಾರಳ್ಳಿ ಶಿವಯೋಗಿ, ಭದ್ರಾ ಕಾಲೇಜು ಟ್ರಸ್ಟಿ ಎಂ. ಸಂಕೇತ್, ಗುತ್ತಿಗೆದಾರ ಕ್ಯಾಂಪಿನ ಸಿ.ಹೆಚ್. ರವಿ, ಸ.ಹಿ.ಪ್ರಾ. ಶಾಲೆಎಸ್‌ಡಿಎಂಸಿ ಅಧ್ಯಕ್ಷ ಎಂ.ಹೆಚ್. ಶರಣ್, ಅನೇಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹರಿಹರ ಬಿಇಒ ಕಚೇರಿಯ ಎಸಿಒ ಕೆ.ಎಸ್. ತೀರ್ಥಪ್ಪ ಸ್ವಾಗತಿಸಿದರು. ಉಪನ್ಯಾಸಕ ಎ.ಟಿ. ಪ್ರಕಾಶ್ ನಿರೂಪಿಸಿದರು.

# ಅನಧಿಕೃತ ಮಳಿಗೆಗಳ ತೆರವು



ಹರಪನಹಳ್ಳಿ, ಆ.30- ಪಟ್ಟಣದ ಗೋಕರ್ಣೇಶ್ವರ ದೇವಸ್ಥಾನ ಹಾಗೂ ಪುರಸಭೆಯ ಸುಪರ್ದಿಗೆ ಒಳಪಡುವ ಪೂರ್ಣಗೊಳ್ಳದ ಮಳಿಗೆಗಳಲ್ಲಿ ತಲೆ ಎತ್ತಿದ್ದ ಅನಧಿಕೃತ ಅಂಗಡಿಗಳನ್ನು ಪೊಲೀಸ್ ಬಿಗಿ ಭದ್ರತೆಯ ನಡುವೆ ಪುರಸಭೆ ಸಹಯೋಗದಲ್ಲಿ ಹಿಂದೂ ಧಾರ್ಮಿಕ ದತ್ತಿ ಇಲಾಖೆಯಿಂದ ಇಂದು ಕಾರ್ಯಾಚರಣೆ ನಡೆಸಿ, ಜೆಸಿಬಿ ಮೂಲಕ ತೆರವುಗೊಳಿಸಲಾಯಿತು.

**ಹರಪನಹಳ್ಳಿ**

ಅನಧಿಕೃತವಾಗಿ ಅಂಗಡಿ ಹಾಕಿಕೊಂಡಿದ್ದ ವರ್ತಕರಿಗೆ ತೆರವು ಗೊಳಿಸುವಂತೆ ಹಲವು ಬಾರಿ ಸೂಚನೆ ನೀಡುತ್ತಾ ಬಂದಿದ್ದರೂ ತೆರವು ಮಾಡದ ಹಿನ್ನೆಲೆಯಲ್ಲಿ ಉಚ್ಚ ನ್ಯಾಯಾಲಯದ ಆದೇಶದಂತೆ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಎಂ.ಹೆಚ್. ಪ್ರಕಾಶ್‌ರಾವ್ ಅವರು ಉಪವಿಭಾಗಾಧಿಕಾರಿ ಹೆಚ್.ಜಿ. ಚಂದ್ರಶೇಖರಯ್ಯ ಅವರೊಂದಿಗೆ ಸಮಾಲೋಚಿಸಿ ಅಂಗಡಿಗಳನ್ನು ತೆರವು ಗೊಳಿಸಿದರು. ಗೋಕರ್ಣೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಸರ್ವೆ ನಂ 555/2 ರಲ್ಲಿ ಒಟ್ಟು 1.69 ಸೆಂಟ್ಸ್ ಜಮೀನು ಇದ್ದು ಮುಂದಿನ ದಿನಗಳಲ್ಲಿ ಮುಜರಾಯಿ ಇಲಾಖೆಯಿಂದ ನೆನೆಗುದಿಗೆ ಬಿದ್ದಿರುವ ಮಳಿಗೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಎಂದು ಬಳ್ಳಾರಿ ಹಾಗೂ ವಿಜಯನಗರ ಜಿಲ್ಲಾ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಎಂ.ಹೆಚ್. ಪ್ರಕಾಶ್‌ರಾವ್ ತಿಳಿಸಿದ್ದಾರೆ.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಯರಗುಡಿ ಶಿವಕುಮಾರ್, ಹಿರಿಯ ಆರೋಗ್ಯ ನಿರೀಕ್ಷಕ ಬಿ. ಮಂಜುನಾಥ್, ನೈರ್ಮಲ್ಯ ಮೇಲ್ವಿಚಾರಕ ಟಿ. ಶ್ಯಾಮರಾಜ್ ಸೇರಿದಂತೆ, ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ರಮೇಶ್ ಹಾಗೂ ಇಲಾಖೆ ಸಿಬ್ಬಂದಿಗಳು ಹಾಗೂ ಪೊಲೀಸ್ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿದ್ದರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte